ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 45 | ನವೆಂಬರ್ 9, 1980 | ಬೆಲೆ : 50 ಪೈಸೆ

ರಾಜ್ಯೋತ್ಸವ

ನವೆಂಬರ್ ಒಂದರಿಂದ ಕನ್ನಡ ರಾಜ್ಯೋತ್ಸವವು ನಡೆಯುತ್ತಲಿದೆ. ಕನ್ನಡ ರಾಜದ ಉದಯವಾಗಿ 24 ವರ್ಷಗಳು ಕಳೆದು, ಇದೀಗ 25ನೇ ವರ್ಷ ಪ್ರಾರಂಭವಾಗಿದೆ. ಈ ಬಾರಿ ಬೆಳ್ಳಿಹಬ್ಬವನ್ನಾಚರಿಸಲಾಗುತ್ತಿದೆ. ರಾಜ್ಯದ ರಾಜಧಾನಿಯಲ್ಲಂತೂ ಸಮಾರಂಭಗಳ ಕೋಲಾಹಲ. ಕನ್ನಡ ಭಾಷೆಯ ಮೇಲೆ ಎಲ್ಲಿಲ್ಲದ, ಎಂದೂ ಕಾಣದ ಪ್ರೇಮವನ್ನು ತೋರಿಸುವ ಪ್ರಯತ್ನವು ನಡೆದಿದೆ.

ಭಾಷೆಯೆಂಬುದು ಕೇವಲ ವ್ಯವಹಾರಕ್ಕೆ ಮಾತ್ರವಷ್ಟೆ ಸೀಮಿತವಲ್ಲ; ಪರಸ್ಪರ ವಿಚಾರ ವಿನಿಮಯಮಾಡಿ, ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಅನುಭವಗಳನ್ನು ಹಂಚಿಕೊಳ್ಳಲು ಸಾಧ್ಯವಾಗುವಂತೆ ಮಾಡುವ ಒಂದು ಮಾಧ್ಯಮ. ಸಮಾಜದ ಒಟ್ಟು ಬೆಳವಣಿಗೆ ಮತ್ತು ಭಾಷೆಯ ಬೆಳವಣಿಗೆಗಳಿಗೆ ಸಂಬಂಧವಿದೆ. ಸಮಾಜದ ಒಟ್ಟು ಪ್ರಗತಿ, ಅಂದರೆ ದುಡಿಯುವ ಜನಕೋಟಿಯು ಸೇರಿದಂತೆ ಎಲ್ಲಾ ಜನರ ಮುನ್ನಡೆ ಸಾಧಿಸುವುದರಲ್ಲಿ ಭಾಷೆಯದೂ ಮುಖ್ಯ ಪಾತ್ರವಿದೆ. ಭಾಷೆಯೆಂಬುದು ಜನತೆಯ ಭಾಷೆಯಾಗದೆ, ಒಂದು ಭಾಷೆಯನ್ನಾಡುವ ಎಲ್ಲಾ ಜನತೆಗೂ ಒದಗಿಬರಹ ಬಾರದೆ, ಜನತೆಯ ಒಟ್ಟು ಪ್ರಗತಿ ಅಸಾಧ್ಯ; ಒಂದು ಭಾಷೆಯನ್ನಾಡುವ ಜನತೆಯ ಸಾಂಸ್ಕೃತಿಕ ಮತ್ತು ತಿಳುವಳಿಕೆಯುಮಟ್ಟ ಬೆಳೆಯುವುದು ಅಸಾಧ್ಯ.

ಸಂಪಾದಕೀಯ

ರಾಜ್ಯಕ್ಕೆ ಕನ್ನಡರಾಜ್ಯ (ಕರ್ನಾಟಕ) ವೆಂದು ಹೆಸರು ಹಾಕಿದ ತಕ್ಷಣ, ಅಥವಾ ಕನ್ನಡವನ್ನು ಸರಕಾರಿ ಭಾಷೆ ಎಂದು ಸಾರಿದ ಕೂಡಲೇ ಭಾಷೆಯನ್ನು ಜನತೆಯ ಭಾಷೆಯನ್ನಾಗಿಸುವುದು ಅಸಾಧ್ಯ. ಇಂದಿನವರೆಗೆ ನೂರಕ್ಕೆ ಎಪ್ಪತ್ತು ಮಂದಿ ಅನಕ್ಷರಸ್ಥರಿರುವರೋ, ಹಾಗೆಯೇ ಎಂದಿನವರೆಗೆ ಭಾಷೆಯು ಗುತ್ತೇದಾರಿತನ ಸಮಾಜದ ಮುಂದುವರಿದ ವಿಭಾಗದ ಕೈಯಲ್ಲಿರುವುದೋ ಅಂದಿನ ತನಕ ರಾಜ್ಯದ ಹೆಸರು ಅರ್ಥಪೂರ್ಣವಾಗುವುದಿಲ್ಲ. ಆದುದರಿಂದಲೇ ರಾಜ್ಯೋತ್ಸವದ ಬೆಳ್ಳಿಹಬ್ಬ ಸಮಾರಂಭದ ಸಂದರ್ಭ ಕನ್ನಡಿಗರೆಲ್ಲಾ ಸಂತಸಪಡುವುದರೊಂದಿಗೆ, ಭಾಷೆಯನ್ನು ಜನತೆಯ ಸ್ವತ್ತನ್ನಾಗಿಸುವತ್ತ ಚಿಂತನೆಮಾಡಬೇಕು. ಬಂಡವಾಳಶಾಹಿ-ಭೂಮಾಲೀಕರ ಪರವಾಗಿರುವ ಸರಕಾರದಿಂದ ಈ ಕಾರ್ಯ ನಡೆಯುತ್ತದೆ ಎಂದೆಣಿಸಿದರೆ ತಪ್ಪಾಗುವುದು.

ರಾಜ್ಯೋತ್ಸವ ನಡೆಯುತ್ತಿದ್ದಂತೆಯೇ ಕನ್ನಡಿಗರನ್ನೆಲ್ಲಾ ನಾಚಿಸುವಂತಹ ಘಟನೆಯೂ ಜರುಗಿತು. ಪ್ರಗತಿಶೀಲ ಹಾಗೂ ಜನಪ್ರಿಯ ಸಾಹಿತಿ ಲಂಕೇಶರ ಮೇಲೆ ಗೂಂಡಾಗಳಿಂದ ಹಲ್ಲೆಯೂ ನಡೆಯಿತು. ಇದು

[ಕಡೆಯ ಪುಟ ನೋಡಿ]

ಕಾಂಗ್ರೆಸ್ ಕೋಟೆ ಬಿರುಕು ಬಿಡುತ್ತಿದೆ

"ಕಾರ್ಯಪ್ರವೃತ್ತ ಸರಕಾರವನ್ನು ಒದಗಿಸುತ್ತೇವೆ" ಎಂದು ದೇಶದ ಜನತೆಗೆ ಆಶ್ವಾಸನೆ ಕೊಟ್ಟು ಹತ್ತು ತಿಂಗಳ ಹಿಂದೆ ಅಧಿಕಾರಕ್ಕೆ ಬಂದ ಇಂದಿರಾ ಕಾಂಗ್ರೆಸ್ ಪಕ್ಷದ ಕೋಟೆ ಬಿರುಕು ಬಿಡುತ್ತಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ಲೋಕಸಭೆಯಲ್ಲಿ ಸಿ.ಪಿ.ಐ.(ಎಂ) ಗುಂಪಿನ ನಾಯಕ ಕಾಂ. ಸಮರ್ ಮುಖರ್ಜಿಯವರು ಅಕ್ಟೋಬರ್ ೩೦ರಂದು ಬೆಂಗಳೂರಿನಲ್ಲಿ ಮಾತನಾಡುತ್ತಾ ಹೇಳಿದರು.

ರೈಲ್ವೆ ಸಚಿವ ಕಮಲಾಪತಿ ತ್ರಿಪಾಠಿಯವರ ರಾಜೀನಾಮೆ, ಕಾಂಗ್ರೆಸ್‌ನ ಮಹಾರಾಷ್ಟ್ರ ಘಟಕದ ಅಧ್ಯಕ್ಷರ ರಾಜೀನಾಮೆ, ಕರ್ನಾಟಕ ಮುಖ್ಯಮಂತ್ರಿ ಗುಂಡೂರಾವ್ ಹಾಗೂ ಕಂದಾಯ ಸಚಿವ ಬಂಗಾರಪ್ಪ ಅವರ ನಡುವಿನ ಬಹಿರಂಗ ವಿರಸ ಮುಂತಾದ ಸಂಗತಿಗಳನ್ನು ಕಾಂ. ಮುಖರ್ಜಿ ತಮ್ಮ ವಿಶ್ಲೇಷಣೆಯ ಸಮರ್ಥನೆಗಾಗಿ ನೀಡಿದರು.

ಪಕ್ಷದ ಸದಸ್ಯರು ಮತ್ತು ಹಿತೈಷಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಾಂ. ಸಮರ ಮುಖರ್ಜಿಯವರು, ಅಧಿಕಾರಾರೂಢ ಪಕ್ಷದ ಅಭದ್ರತೆಯಿಂದಾಗಿ ದೇಶದ ರಾಜಕೀಯ ಪರಿಸ್ಥಿತಿಯೂ ಹಾಳಾಗಿದೆ ಎಂದು ನುಡಿದರು. ಆಂತರಿಕ ಕಚ್ಚಾಟದಿಂದ ತುಂಬಿಹೋಗಿರುವ ಕಾಂಗ್ರೆಸ್ ಪಕ್ಷದಿಂದ ದಕ್ಷ ಹಾಗೂ ಕಾರ್ಯಪ್ರವೃತ್ತ ಸರಕಾರವನ್ನು ನಿರೀಕ್ಷಿಸುವುದು ಹೇಗೆ ಎಂದು ಪ್ರಶ್ನಿಸಿದರು.

ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ದೇಶದ ಜನತೆಗೆ ತಾನು ಕೊಟ್ಟಿದ್ದ ಎಲ್ಲಾ ಆಶ್ವಾಸನೆಗಳನ್ನು ಕಾಂಗ್ರೆಸ್ ಸರ್ಕಾರವು ಮರೆತುಬಿಟ್ಟಿದೆ ಎಂದು ನುಡಿದ ಕಾಂ. ಮುಖರ್ಜಿ, ರಾಷ್ಟ್ರವು ಕೋಮು ಗಲಭೆ, ಬೆಲೆ ಏರಿಕೆ ಮತ್ತು ಪ್ರತ್ಯೇಕತಾವಾದಿ ಚಳುವಳಿಯಂತಹ ಗಂಭೀರ ಸಮಸ್ಯೆಗಳಿಗೆ ಸಿಕ್ಕಿಕೊಂಡಿದೆ; ಇದಕ್ಕೆ ಆಳುವ ಪಕ್ಷವೇ ಪೂರ್ಣ ಜವಾಬ್ದಾರಿ ಎಂದು ಹೇಳಿದರು.

ಅಧ್ಯಕ್ಷೀಯ ಪದ್ಧತಿಗೆ ಪಿತೂರಿ :

ಬೆಲೆ ಏರಿಕೆ, ನಿರುದ್ಯೋಗದಂತಹ ಸಮಸ್ಯೆಗಳಿಂದ ತತ್ತರಿಸಿ ಹೋಗಿರುವ ಬಡಜನತೆಯು ಹೋರಾಟದ ಮಾರ್ಗದತ್ತ ನಡೆದಿರುವದರಿಂದ ರಾಷ್ಟ್ರೀಯ ಭದ್ರತಾ ಶಾಸನದಂತಹ ಕರಾಳ ಶಾಸನ ತಂದು ಹೋರಾಟಗಳನ್ನು

[ಕಡೆಯ ಪುಟ ನೋಡಿ]

ಸರ್ವಾಧಿಕಾರಿ ಪ್ರವೃತ್ತಿಯ ವಿರುದ್ಧ ಐಕ್ಯ ಹೋರಾಟಕ್ಕೆ ಕರೆ

ತಾ.೨೩-೧೦-೮೦ರಿಂದ ತಾ. ೨೬-೧೦-೮೦ರ ವರೆಗೆ ನವದೆಹಲಿಯಲ್ಲಿ ಸಭೆ ಸೇರಿದ್ದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ರಂಗದಲ್ಲಿ ನಡೆದಿರುವ ವಿದ್ಯಮಾನಗಳ ಕುರಿತು ಚರ್ಚಿಸಿ ದೇಶದಲ್ಲಿ ಮತ್ತೊಮ್ಮೆ ಬಲವಾಗಿ ತಲೆಯೆತ್ತುತ್ತಿರುವ ಸರ್ವಾಧಿಕಾರಿ ಪ್ರವೃತ್ತಿಯನ್ನು ತಡೆಗಟ್ಟಲು ಸಂಘಟಿತ ಐಕ್ಯಹೋರಾಟ ನಡೆಸುವಂತೆ ಎಲ್ಲಾ ವಿರೋಧ ಪಕ್ಷಗಳನ್ನೂ ಪ್ರಜಾಪ್ರಭುತ್ವವಾದಿಗಳನ್ನೂ ವಿನಂತಿಸಿದೆ.

ಇರಾನ್ ಇರಾಕ್‌ಗಳ ನಡುವೆ ಇದೀಗ ನಡೆಯುತ್ತಿರುವ ಸಮರದ ಕುರಿತೂ ತೀವ್ರ ಕಳವಳ ವ್ಯಕ್ತಪಡಿಸಿದ ಕೇಂದ್ರಸಮಿತಿಯು ಅಲಿಪ್ತ ಕೂಟಕ್ಕೆ ಸೇರಿರುವ ಈ ಎರಡು ರಾಷ್ಟ್ರಗಳೊಳಗಿನ ಯುದ್ಧದಿಂದಾಗಿ ಸ್ವತಃ ಅವುಗಳ ಅರ್ಥವ್ಯವಸ್ಥೆ ಕೆಡುತ್ತಿರುವುದೇ ಅಲ್ಲದೆ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳ ಅರ್ಥವ್ಯವಸ್ಥೆಯೂ ಕಂಗೆಡುವಂತಾಗುತ್ತಿದೆ. ಈ ಸಮರವು ಅರಬ್ ಐಕ್ಯದ ಮೇಲೂ ಪಾಲೆಸ್ತೀನ್ ವಿಮೋಚನಾ ಚಳುವಳಿಯ ಮೇಲೂ ತೀವ್ರ ದುಷ್ಪರಿಣಾಮವುಂಟುಮಾಡುವ ಕಾರಣ ಮಧ್ಯಪ್ರಾಚ್ಯದಲ್ಲಿ ಅಸ್ಥಿರತೆ ನಿರ್ಮಾಣವಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ಈ ಪ್ರದೇಶದಲ್ಲಿ ಹಸ್ತಕ್ಷೇಪ ನಡೆಸಲು ಮುಕ್ತ ಅವಕಾಶವೊದಗಿಸಿಕೊಟ್ಟಿದೆ. ಆದಕಾರಣ ಈ ಎರಡೂ ರಾಷ್ಟ್ರಗಳೂ ತಮ್ಮ ಭಿನ್ನಾಭಿಪ್ರಾಯಗಳನ್ನು ಸೌಹಾರ್ದದಿಂದ ಬಗೆಹರಿಸಿಕೊಳ್ಳಬೇಕೆಂದೂ ಕೇಂದ್ರಸಮಿತಿ ಆಶಯವ್ಯಕ್ತಪಡಿಸಿದೆ.

ಅಮೇರಿಕಾ ಮತ್ತು ಉತ್ತರ ಅಟ್ಲಾಂಟಿಕ್ ಒಪ್ಪಂದ ಕೂಟಕ್ಕೆ (Nato) ಸೇರಿದ ರಾಷ್ಟ್ರಗಳು ಪ. ಯುರೋಪಿನಲ್ಲಿ ಅಣು ಪ್ರಕ್ಷೇಪಾಸ್ತ್ರಗಳನ್ನು ಸ್ಥಾಪಿಸಿರುವುದನ್ನು ಡೀಗೋ ಗಾರ್ಸಿಯಾವನ್ನು ಹಿಂದೂ ಮಹಾಸಾಗರದ ಅತ್ಯಂತ ದೊಡ್ಡ ಸೈನಿಕ ನೆಲೆಯಾಗಿ ಮಾರ್ಪಡಿಸುತ್ತಿರುವುದನ್ನೂ ನ್ಯೂಟ್ರಾನ್ ಬಾಂಬಿನಿಂದ ತೊಡಗಿ ಭಯಾನಕ ಮಾರಕ ಅಸ್ತ್ರಗಳನ್ನು ಒಂದೇ ಸಮನೆ ಉತ್ಪಾದಿಸಿ ರಾಶಿಹಾಕಿಕೊಳ್ಳುತ್ತಿರುವುದನ್ನೂ ಕೇಂದ್ರಸಮಿತಿ ತೀರ ಆತಂಕದಿಂದ ಗಮನಿಸಿದೆ. ಅದೇ ವೇಳೆ ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ರಾಷ್ಟ್ರಗಳನ್ನು ಒಳಗೊಂಡು ಶಾಂತಿಪ್ರಿಯ ರಾಷ್ಟ್ರಗಳೆಲ್ಲ ಈ ಶಸ್ತ್ರ ಸನ್ನಾಹದ ವಿರುದ್ಧ ಸೂಕ್ತ ಪ್ರತಿಕ್ರಮ ಕೈಗೊಳ್ಳುತ್ತಿರುವುದೂ ಸ್ವಾಗತಾರ್ಹ. ವಿಶ್ವಾದ್ಯಂತ ದುಡಿಯುವ ವರ್ಗ ಮತ್ತು ಶಾಂತಿಪ್ರಿಯ ಜನತೆ ಅಣ್ವಸ್ತ್ರ ನಿಷೇಧ, ರಾಸಾಯನಿಕ ಯುದ್ಧದ ತಡೆಗಟ್ಟುವಿಕೆ ಮತ್ತು ಈಗಾಗಲೇ ಸಂಗ್ರಹಿಸಿಕೊಂಡಿರುವ ಅಣ್ವಸ್ತ್ರಗಳನ್ನು ನಾಶಗೊಳಿಸಬೇಕೆಂದು ಕೇಳಿ ಶಾಂತಿಗಾಗಿ ಹೋರಾಟ ನಡೆಸುತ್ತಿರುವುದನ್ನೂ ಕೇಂದ್ರ ಸಮಿತಿ ಸ್ವಾಗತಿಸಿ ಆ ಬೇಡಿಕೆಗಳ ಆಧಾರದಲ್ಲಿ ನಮ್ಮ ದೇಶದ ಜನತೆಯನ್ನೂ ಒಂದುಗೂಡಿಸಬೇಕೆಂಬ ಕರೆ ನೀಡಿದೆ.

ಶ್ರೀಲಂಕಾದಲ್ಲಿ ತುರ್ತುಪರಿಸ್ಥಿತಿ ಸಾರಲಾಗಿರುವುದನ್ನೂ ಮಾಜಿಪ್ರಧಾನಿ ಸಿರಿಮಾವೋ ಅವರ ನಾಗರಿಕ ಹಕ್ಕುಗಳನ್ನು ಏಕಪಕ್ಷೀಯವಾಗಿ ಕಿತ್ತುಹಾಕಲಾಗಿರುವುದನ್ನೂ ಕೇಂದ್ರಸಮಿತಿ ಖಂಡಿಸಿದೆಯಲ್ಲದೆ ಪ್ರಜಾಸತ್ತಾತ್ಮಕ, ನಾಗರಿಕ ಮತ್ತು ಕಾರ್ಮಿಕ ಹಕ್ಕುಗಳಿಗಾಗಿ ಶ್ರೀಲಂಕಾದ ಜನತೆ ನಡೆಸುವ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದೆ.

ಕಳೆದ ಹನ್ನೊಂದು ತಿಂಗಳಿಂದ ವಿದೇಶೀಯರ ಪ್ರಶ್ನೆಯ ಕುರಿತು ಅಸ್ಸಾಮಿನಲ್ಲಿ ನಡೆಯುತ್ತಿದ್ದ ಚಳುವಳಿಯನ್ನು ಮತ್ತೆ ಆರಂಭಿಸಲಾಗಿರುವುದರ ಬಗ್ಗೆ ಕೇಂದ್ರ ಸಮಿತಿ ಕಳವಳ ವ್ಯಕ್ತಪಡಿಸಿ ದೇಶದ ಆರ್ಥಿಕತೆಗೆ ಅಪಾರ ಹಾನಿಯುಂಟುಮಾಡಿರುವ ಈ ಚಳುವಳಿಯನ್ನು ಕೂಡಲೇ ನಿಲ್ಲಿಸುವಂತೆಯೂ ಮಾತುಕತೆಗೆ ಮತ್ತೆ ಹಾಜರಾಗುವಂತೆಯೂ ಎ. ಎ. ಎಸ್. ಯು. ಮತ್ತು ಗಣಸಂಗ್ರಾಮ ಪರಿಷತ್‌ಗಳನ್ನು ವಿನಂತಿಸಿದೆ. ಸಾಮ್ರಾಜ್ಯಶಾಹಿ ಏಜನ್ಸಿಗಳ ನೆರವಿನಿಂದ ನಡೆಸಲ್ಪಡುತ್ತಿರುವ ಈ ಚಳುವಳಿಯ

[ಕಡೆಯ ಪುಟ ನೋಡಿ]

ಕುದುರೆಮುಖದಲ್ಲಿ ಬಹಿರಂಗ ಸಭೆ

ತಾ. 27-10-1980 ರಂದು ಸೋಮವಾರ ಕುದುರೆಮುಖದಲ್ಲಿ ಸಿ ಐ ಟಿ ಯು ಗೆ ಸೇರಿದ ಎಚ್. ಎಸ್. ಸಿ. ಎಲ್. ನೌಕರರ ಸಂಘದ ಆಶ್ರಯದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಈ ಸಭೆಯಲ್ಲಿ ಲೋಕಸಭಾ ಸದಸ್ಯ ಕಾಂ. ಎಮ್. ರಾಮಣ್ಣರೈ ಹಾಗೂ ಸಿ ಐ ಟಿ ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಸಿ ನಂಜುಂಡಪ್ಪ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಿ.ಐ.ಟಿ.ಯು. ವಿನ ಪ್ರಧಾನ ಕಾರ್ಯದರ್ಶಿ ಕಾಂ. ಮಾಸಬ್ಬನವರು ಉಪಸ್ಥಿತರಿದ್ದರು.

ಸಭೆಯ ಅಧ್ಯಕ್ಷತೆಯನ್ನು ಕಾಂ. ಸಿ. ನಂಜುಂಡಪ್ಪನವರು ವಹಿಸಿದ್ದರು.

ಲೋಕಸಭಾ ಸದಸ್ಯ ಕಾಂ ಎಂ. ರಾಮಣ್ಣರೈಯವರು ಮಾತನಾಡುತ್ತಾ ಎಚ್. ಎಸ್. ಸಿ. ಎಲ್. ಆಡಳಿತ ವರ್ಗವು ತಾ. 24-9-80 ರಂದು 239 ಕಾರ್ಮಿಕರನ್ನು ಅನ್ಯಾಯವಾಗಿ ಕೆಲಸದಿಂದ ವಜಾ ಮಾಡಿದ್ದಕ್ಕೆ ತಮ್ಮ ಆಕ್ಷೇಪವನ್ನು ವ್ಯಕ್ತಪಡಿಸಿದರು.

ಎಚ್. ಎಸ್. ಸಿ. ಎಲ್. ಗೆ ದೇಶ ವಿದೇಶಗಳಲ್ಲಿಯೂ ಶಾಖೆಗಳಿದ್ದು ಎಚ್.ಎಸ್.ಸಿ.ಎಲ್. ಈ ವಜಾಗೊಂಡ ನೌಕರರನ್ನು ಸೇರಿಸಿಕೊಳ್ಳಬಹುದು ಎಂದು ಸ್ಪಷ್ಟಪಡಿಸಿದರು. ರಿಟ್ರೆಂಚ್‌ಮೆಂಟ್ ವಿರುದ್ಧ ಸತತವಾಗಿ ನಡೆಯುತ್ತಿರುವ ಚಳುವಳಿಗೆ ತಮ್ಮ ಬೆಂಬಲವನ್ನು ಸಾರಿದರಲ್ಲದೆ ಈ ಬಗ್ಗೆ ಕಾರ್ಮಿಕರಿಗಾದ ಅನ್ಯಾಯವನ್ನು ಲೋಕಸಭೆಯಲ್ಲಿ ಕೇಂದ್ರ ಸರ್ಕಾರವನ್ನು ಪ್ರಶ್ನಿಸುವದಾಗಿ ತಿಳಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಎಚ್.ಎಸ್.ಸಿ.ಎಲ್. ಆಡಳಿತ ವರ್ಗವು 239 ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿದುದನ್ನು ಖಂಡಿಸಿದರು. ಕರ್ನಾಟಕ ರಾಜ್ಯದ ಸೂಪಾದಲ್ಲಿಯೇ ಎಚ್ ಎಸ್.ಸಿ ಎಲ್. ಕಾರ್ಯನಿರ್ವಹಿಸುತ್ತಿರುವುದರಿಂದ ಈ ಕಾರ್ಮಿಕರನ್ನು ಅಲ್ಲಿಗೆ ವರ್ಗಾಯಿಸಬಹುದಿತ್ತು ಎಂದು ಹೇಳಿದರಲ್ಲದೆ ಖಾಸಗಿ ಕಂಟ್ರಾಕ್ಟ್‌ದಾರರಿಗೆ ಕೆಲಸ ನೀಡಿ ಈ ಖಾಯಂ ಕೆಲಸಗಾರರನ್ನು ವಜಾ ಮಾಡುವುದನ್ನು ವಿರೋಧಿಸಿದರು. ಎಚ್.ಎಸ್.ಸಿ ಎಲ್ ಗೆ ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿ ಕೂಡ ಶಾಖೆಗಳಿದ್ದು ಕಾರ್ಯನಿರ್ವಹಿಸುತ್ತಿದ್ದು ಕಾರ್ಮಿಕರ ಅವಶ್ಯಕತೆಯಿರುವ ಈ ಸಂದರ್ಭದಲ್ಲಿ 239 ಖಾಯಂ ಕೆಲಸಗಾರರನ್ನು ಕಂಪೆನಿಯಿಂದ ಹೊರದಬ್ಬಿದುದು ಅನ್ಯಾಯವೆಂದು ಹೇಳಿದರು.

24-9-80ರಿಂದ ರಿಟ್ರೆಂಚ್‌ಮೆಂಟ್ ವಿರುದ್ಧ ಕಾರ್ಮಿಕರು ನಡೆಸುತ್ತಿರುವ ಸತತವಾದ ಧರಣಿ ಮುಷ್ಕರಕ್ಕೆ ಸಿ. ಐ. ಟಿ. ಯು. ಪರವಾಗಿ ತಮ್ಮ ಬೆಂಬಲವನ್ನು ಸಾರಿದರು.

ಈ ಸಭೆಯು ಅಕ್ಟೋಬರ್ 1ನೇ ತಾರೀಕಿನಿಂದ ಮಂಗಳೂರಿನ ಆಟೋ ರಿಕ್ಷಾ ಚಾಲಕರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ಸೂಚಿಸಿತು.

ಪ್ರಾರಂಭದಲ್ಲಿ ಸಂಘದ ಅಧ್ಯಕ್ಷರಾದ ಕಾಂ. ರಾಮದಾಸ್ ಆಚಾರಿಯವರು ಸ್ವಾಗತಿಸಿದರು.

ಕೊನೆಯಲ್ಲಿ ಕಾಂ. ಎಂ. ರುದ್ರಪ್ಪನವರು ಧನ್ಯವಾದ ಅರ್ಪಿಸಿದರು.

●

ಹೋರಾಟದ ಹಾದಿಯಲ್ಲಿ ಬೆಂಗಳೂರು ಆಟೋ ಚಾಲಕರು

ಆಟೋ ರಿಕ್ಷಾ ಚಾಲಕರ ಸಂಘದ ಆಶ್ರಯದಲ್ಲಿ ಇಂದು ಬೆಳಿಗ್ಗೆ 10-30 ಕ್ಕೆ ಮಿನರ್ವ ಸರ್ಕಲ್ ಬಳಿಯಲ್ಲಿರುವ ಅರಸೋಜಿರಾವ್ ಕಲ್ಯಾಣ ಮಂಟಪದಲ್ಲಿ ಚಾಲಕರ ಸರ್ವಸದಸ್ಯರ ಸಭೆಯು ಸಂಘದ ಅಧ್ಯಕ್ಷ ಕಾಮೆಡ್ ಎಸ್. ಸೂರ್ಯನಾರಾಯಣರಾವ್, ಉಪಾಧ್ಯಕ್ಷ ಕೆ. ಎ. ಹುಸೇನ್ ಹಾಗೂ ಪ್ರಧಾನ ಕಾರ್ಯದರ್ಶಿ ಕಾಂ. ಪಿ ಕೆ. ಸುಬ್ರಮಣಿಯವರ ನಾಯಕತ್ವದಲ್ಲಿ ಸೇರಿತು. ಈ ಸಭೆಯು ಆಟೋರಿಕ್ಷಾ ಚಾಲಕರ ಪ್ರಸಕ್ತದ ಸಮಸ್ಯೆಯನ್ನು ಕುರಿತು ಚರ್ಚಿಸಿ ಸರ್ವಾನುಮತದಿಂದ ಕೆಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ನಿರ್ಣಯಗಳು :

1. ಕಳೆದ ಮಾರ್ಚ್ ತಿಂಗಳಲ್ಲಿ ಜಾರಿಗೆ ತಂದ ರೀ-ಗ್ರ್ಯಾಂಟ್ ಪದ್ಧತಿಯನ್ನು ಸೆಪ್ಟೆಂಬರ್ 24ರಲ್ಲಿ ಏಕ ಪಕ್ಷೀಯವಾಗಿ ನಿಲ್ಲಿಸಲಾಗಿದೆ. ಆರ್.ಟಿ.ಓ. ನವರು ಇದನ್ನು ನಿಲ್ಲಿಸಿರುವುದರಿಂದ ಸಾವಿರಾರು ಆಟೋರಿಕ್ಷಾ ಚಾಲಕರಿಗೆ ಕಿರುಕುಳ ಮತ್ತು ಮೊಕದ್ದಮೆಗಳನ್ನು ಬುಕ್ ಮಾಡಿ ರಿಕ್ಷಾಗಳನ್ನು ಸೀಸ್ ಮಾಡುವುದು ನಡೆಯುತ್ತಿರುವುದನ್ನು ಈ ಸಭೆಯು ಖಂಡಿಸುತ್ತದೆ.

2. ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಮತ್ತು ರೀಜನಲ್ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳು ನಿಲ್ಲಿಸಿರುವ ರೀ-ಗ್ರ್ಯಾಂಟ್ ಪದ್ಧತಿಯು ಕೂಡಲೇ ಜಾರಿಗೆ ತರಬೇಕು. ಸರಕಾರ ಆಟೋ ರಿಕ್ಷಾ ಚಾಲಕರ ಬೇಡಿಕೆಯನ್ನು ಅಂಗೀಕರಿಸಿ ಮುಷ್ಕರವನ್ನು ತಪ್ಪಿಸಬೇಕೆಂದು ಮನವಿ ಮಾಡುತ್ತದೆ. ಮಾನ್ಯ ಮಾಡದಿದ್ದರೆ, ಆಟೋ ರಿಕ್ಷಾ ಚಾಲಕರೆಲ್ಲರೂ ಬರುವ ತಿಂಗಳು 13ನೇ ತಾರೀಕು ಸಾಂಕೇತಿಕ ಆಟೋ ಮುಷ್ಕರವನ್ನು ಹೂಡಬೇಕೆಂದು ಈ ಸಭೆ ತೀರ್ಮಾನಿಸುತ್ತದೆ.

3. ಇತ್ತೀಚೆಗೆ ಸಾವಿರಾರು ಆಟೋರಿಕ್ಷಾ ಚಾಲಕರ ಮೇಲೆ ಅನಾವಶ್ಯಕವಾಗಿ ಪರ್ಮಿಟ್ ವಿಷಯವಾಗಿ ಪೋಲೀಸ್ ಮೊಕದ್ದಮೆಗಳನ್ನು ದಾಖಲು ಮಾಡಿ, ಅದರ ಫಲವಾಗಿ ಚಾಲಕರಿಂದ ನೂರಾರು ರೂಗಳನ್ನು ದಂಡ ಹಾಕಲಾಗಿದೆ. ಈ ರೀತಿಯ ಚಿತ್ರಹಿಂಸೆಯನ್ನು ಕೂಡಲೇ ನಿಲ್ಲಿಸಬೇಕು. ಇದರಲ್ಲಿ ಆರ್ ಟಿ ಓ. ಅಧಿಕಾರಿಗಳು ಕೊಟ್ಟಿರುವ ಗುರುತಿನ ಚೀಟಿಗಳ ಮೇಲೆಯೇ ಮೊಕದ್ದಮೆಗಳನ್ನು ಹಾಕಿ ಪೋಲೀಸರು ಕಿರುಕುಳ ಕೊಡುವುದನ್ನು ಕೂಡಲೇ ನಿಲ್ಲಿಸಬೇಕೆಂದು ತೀರ್ಮಾನಿಸಲಾಯಿತು.

4. ರಾಜ್ಯದ ರೈತರ ನ್ಯಾಯಯುತ ಚಳುವಳಿಗೆ ಆಟೋರಿಕ್ಷಾ ಚಾಲಕರ ಸರ್ವ ಸದಸ್ಯರ ಸಭೆಯು ಸರ್ವಾನುಮತದಿಂದ ತನ್ನ ಸಂಪೂರ್ಣ ಬೆಂಬಲವನ್ನು ಸೂಚಿಸಲಾಯಿತು.

ಈ ಸಭೆಯು ನಂತರ ಎಸ್. ಸೂರ್ಯನಾರಾಯಣರಾವ್‌ರವರ ನಾಯಕತ್ವದಲ್ಲಿ ನಿಯೋಗ ಸಮಿತಿ ರಚಿಸಲಾಯಿತು.

ಪಿ ಕೆ ಸುಬ್ರಮಣಿ, ಎ.ವಿ. ರಮೇಶ, ಜಿ ಸುಬ್ಬರಾವ್, ಮಲ್ಲಿಕಾರ್ಜುನ, ಸಂಪತ್, ಶ್ರೀರಾಮಶೆಟ್ಟಿ, ಪಾಂಡುರಂಗಪ್ಪ, ಕೆ ಎ ಹುಸೇನ್, ಬಿ. ಕೆ. ನಾಗರಾಜ್, ಬಿ. ಆರ್. ರಂಗಪ್ಪ, ಜಿ ವಿ ಲಕ್ಷ್ಮಣ, ಸಯದ್ ಮುತ್ತುಜ, ನಂಜುಂಡಪ್ಪ, ಮುನಿನಂಜಪ್ಪ.

●

ರೈತರ ಹೋರಾಟ ಮತ್ತು ಅದಕ್ಕೆ ಸಂಬಂಧಿಸಿದ ಕೆಲವು ಸಮಸ್ಯೆಗಳು

ಅಕ್ಟೋಬರ 26 ರಂದು ಹುಬ್ಬಳ್ಳಿಯಲ್ಲಿ ಜರುಗಿದ ರಾಜ್ಯ ರೈತ ಸಮನ್ವಯ ಸಮಿತಿಯಲ್ಲಿ ಭಾಗವಹಿಸಿದ ಘಟಪ್ರಭಾ ರೈತರ ಸಮನ್ವಯ ಸಮಿತಿಯ ಸಂಚಾಲಕರಾದ ಕಾಂ. ಬಿ.ಎಸ್. ಧಾರವಾಡಕರರು ಗೋಕಾಕದಿಂದ ಈ ಕೆಳಗಿನ ಪತ್ರಿಕಾ ಹೇಳಿಕೆಯನ್ನು ಹೊರಡಿಸಿದ್ದಾರೆ.

"ರಾಜ್ಯದಾದ್ಯಂತ ಕರನಿರಾಕರಣೆಯ ಚಳುವಳಿ ಆರಂಭಿಸಲು ರಾಜ್ಯ ಸಮನ್ವಯ ಸಮಿತಿ ನೀಡಿದ ಕರೆಯ ಮೇರೆಗೆ ಚಳುವಳಿಯ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಹಳ್ಳಿಹಳ್ಳಿಗಳಲ್ಲಿ ಸಮಿತಿಗಳನ್ನು ರಚಿಸಿ ಕರನಿರಾಕರಣೆ ಚಳುವಳಿಯ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಲಾಗುವುದು."

"ರಾಜ್ಯದಲ್ಲಿ ಪಕ್ಷಾತೀತ ರೈತ ಸಂಘಟನೆ ಇರಬೇಕು. ರಾಜಕೀಯ ಕಾರ್ಯಕರ್ತರನ್ನು ರೈತಸಂಘಟನೆಯ ಪದಾಧಿಕಾರಿಗಳನ್ನಾಗಿ ಆರಿಸಬಾರದೆಂಬ ಶಿವಮೊಗ್ಗ ರೈತರ ಮತ್ತು ಬೆಳಗಾವಿ ಜಿಲ್ಲಾ ರೈತಸಂಘದ ನಿಲುವಿಯ ಬಗ್ಗೆ ಸಂಬಂಧಿತ ರೈತ ಸಂಘಟನೆಯವರು ತೀರ್ಮಾನಿಸಬೇಕಾದ ವಿಚಾರಗಳಾಗಿದ್ದು ರಾಜ್ಯ ಸಮನ್ವಯ ಸಮಿತಿಯ ಹೆಸರಿನಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸುವದಕ್ಕೆ ನನ್ನ ತೀವ್ರ ವಿರೋಧವಿದೆ."

"ಶಿವಮೊಗ್ಗದ ಮುಖಂಡರು ಹಾಗೂ ಇನ್ನೂ ಕೆಲವರು ರಾಜ್ಯ ಸಮನ್ವಯ ಸಮಿತಿಯ ವೇದಿಕೆಯ ಮೇಲೆ ನಾರಾಯಣಸ್ವಾಮಿ ನಾಯುಡುರವರ ಮುಖವಾಣಿಯಾಗಿ ವರ್ತಿಸುವದು ಶಿಷ್ಟಸಂಕೇತಗಳಿಗೆ ಅನುಗುಣವಾಗಿರುವದಿಲ್ಲ. ರಾಜ್ಯದ ರೈತರನ್ನೆಲ್ಲ ಬಡಿದೆಬ್ಬಿಸಿದ ನರಗುಂದ ರೈತರ ಬಂಡಾಯವನ್ನು ಎಲ್ಲಾ ರಾಜಕೀಯ ಪಕ್ಷಗಳನ್ನೊಳಗೊಂಡ ರೈತ ಸಮನ್ವಯ ಸಮಿತಿ ಸಂಘಟಿಸಿತೆಂಬ ಅಂಶವನ್ನು ಮರೆಯಕೂಡದು. ರಾಜಕೀಯ ಕಾರ್ಯಕರ್ತರಿಂದ ರೈತಚಳುವಳಿಯನ್ನು ದೂರ ಇಡಲು ಬೆಳಗಾವಿ ಜಿಲ್ಲಾ ರೈತಸಂಘ ಬಯಸಿದರೆ, ಘಟಪ್ರಭಾ ರೈತಸಮನ್ವಯ ಸಮಿತಿಯು ತಾಲ್ಲೂಕದಲ್ಲಿಯ ಎಲ್ಲ ರಾಜಕೀಯ ಪಕ್ಷಗಳ ಕಾರ್ಯಕರ್ತರನ್ನೊಳಗೊಂಡ ವೇದಿಕೆಯಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುವದು."

"ರಾಜ್ಯದ ಹಲವಾರು ಭಾಗಗಳಲ್ಲಿ ಈಗ ರಾಜಕೀಯ ಪಕ್ಷದವರನ್ನೊಳಗೊಂಡ ರೈತಸಂಘಟನೆಗಳು ಆಂದೋಲನಗಳನ್ನು ಸಂಘಟಿಸುತ್ತಲಿದ್ದು. ಈ ಎಲ್ಲ ಸಂಘಟನೆಗಳ ಒಂದು ವೇದಿಕೆಯಾಗಿ ರಾಜ್ಯಸಮನ್ವಯ ಸಮಿತಿ ರೂಪಗೊಳ್ಳಬೇಕು. ರಾಜ್ಯಸಮನ್ವಯ ಸಮಿತಿ ಕೇವಲ ರೈತಹೋರಾಟಗಳ ಮಾರ್ಗದರ್ಶನ ಮಾಡುವ ಒಂದು ವೇದಿಕೆಯಾಗಬೇಕೇ ವಿನಹ ರೈತ ಸಂಘಗಳ ರಾಜ್ಯಸಮಿತಿ ಆಗಬಾರದು. ಶಿವಮೊಗ್ಗದ ಒಂದು ರೈತರ ವಿಭಾಗವೇ ರಾಜ್ಯದ ರೈತರ ಪ್ರಾತಿನಿಧ್ಯತೆ ಮಾಡಲಾರದು."

"ಸ್ವಾತಂತ್ರ್ಯೋತ್ತರ ಕಾಲದ 33 ವರ್ಷಗಳ ಕಾಂಗ್ರೆಸ್ ಆಳ್ವಿಕೆಯ ದಿವಾಳಿಖೋರ ನೀತಿಯ ಫಲವೇ ರೈತರ ಸಮಸ್ಯೆಗಳು ತೀವ್ರಗೊಳ್ಳಲು ಕಾರಣ. ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಜ್ಯದಾದ್ಯಂತದ ರೈತ ಮುಖಂಡರು ಸಲ್ಲದ ವಾದಗಳನ್ನು ಮುಂದೆ ಮಾಡಿ ಬೆಳೆದು ಬರುತ್ತಿರುವ ಹೋರಾಟಗಳನ್ನು ಹಾಳುಮಾಡದೇ ಹೋರಾಟವನ್ನು ಬಲಪಡಿಸುವದು ಬಹು ಮುಖ್ಯವಾದುದು."

○

ಮಂಗಳೂರು :

ಕಾರ್ಮಿಕ ಹೋರಾಟಗಳು ಮತ್ತು ಕಾರ್ಮಿಕ ಇಲಾಖೆ

ಮಂಗಳೂರಿನ ಆಟೋರಿಕ್ಷಾ ಚಾಲಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಅಕ್ಟೋಬರ್ 1ರಿಂದ ಆರ್. ಟಿ. ಓ. ಆಫೀಸಿನ ಮುಂದೆ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅಡಿಕೆ ಕಾರ್ಮಿಕರು 10ನೆಯ ತಾರೀಖಿನಿಂದ, ಜೆಪ್ಪು ಪಿ. ಎಲ್. ಗೇರುಬೀಜ ಕಾರ್ಮಿಕರು 10 ರಿಂದ ಚಳುವಳಿ ನಡೆಸುತ್ತಿದ್ದಾರೆ. ಬೀಡಿಕಾರ್ಮಿಕರು ಲೇಬರ್ ಇಲಾಖೆಯ ಕಛೇರಿಯ ಮುಂದೆ ನಿನ್ನೆಯಿಂದ ಸಾಮೂಹಿಕ ಸತ್ಯಾಗ್ರಹ ನಡೆಸುತ್ತಿದ್ದಾರೆ.

ಮಂಗಳೂರಿನ ಲೇಬರ್ ಆಫೀಸಿನಲ್ಲಿ ಒಂದು ಅಸಿಸ್ಟೆಂಟ್ ಲೇಬರ್ ಕಮೀಷನರ್ ಹುದ್ದೆ, ಒಂದು ಲೇಬರ್ ಆಫೀಸರ್ ಹುದ್ದೆ, ಒಂದು ಸ್ಟೆನೋಗ್ರಾಫರ್ ಹುದ್ದೆ, ಒಂದು ಲೇಬರ್ ಇನ್ಸ್‌ಪೆಕ್ಟರ್ ಹುದ್ದೆ. ಮೂರು ದ್ವಿತೀಯ ದರ್ಜೆಯ ಗುಮಾಸ್ತರ ಹುದ್ದೆಗಳು ಹಲವು ತಿಂಗಳುಗಳಿಂದಲೂ, ಅವುಗಳಲ್ಲಿ ಕೆಲವು ಹುದ್ದೆಗಳು ಹಲವು ವರ್ಷಗಳಿಂದ ಖಾಲಿ ಇವೆ. ನಿರುದ್ಯೋಗದ ಪೆಡಂಭೂತವು ನಮ್ಮ ನಾಡಿನ ಯುವಜನತೆಯನ್ನು ಕಾಡುತ್ತಿರುವಾಗ ಸರ್ಕಾರಿ ಕಛೇರಿಯಲ್ಲಿ ಇಷ್ಟೆಲ್ಲಾ ಹುದ್ದೆಗಳು ಖಾಲಿ ಇರುವುದು ವಿಪರ್ಯಾಸ!

ಮಂಗಳೂರಿನಲ್ಲಿ ಸಾವಿರಾರು ಕಾರ್ಮಿಕರು ಚಳುವಳಿ ನಡೆಸುತ್ತಿರುವಾಗ, ಲೇಬರ್ ಆಫೀಸಿನ ಮುಂದೆ ನೂರಾರು ಕಾರ್ಮಿಕರು ಸತ್ಯಾಗ್ರಹ ನಡೆಸುತ್ತಿರುವಾಗ ಇರುವ ಒಬ್ಬ ಲೇಬರ್ ಆಫೀಸರಾಗಲೀ ಇಬ್ಬರು ಲೇಬರ್ ಇನ್ಸ್‌ಪೆಕ್ಟರರಾಗಲೀ ಆಫೀಸಿನಲ್ಲಿ ಇರುವುದಿಲ್ಲ.

ಇಂತಹ ಸನ್ನಿವೇಶದಲ್ಲಿ ಲೇಬರ್ ಇಲಾಖೆಯ ಒಬ್ಬ ಜವಾಬ್ದಾರಿಯುತ ಅಧಿಕಾರಿಯೂ ಆಫೀಸಿನಲ್ಲಿಲ್ಲದಿರು

[ಕಡೆಯ ಪುಟ ನೋಡಿ]

ಕರ್ನಾಟಕ ರಾಜ್ಯ ಆರೋಗ್ಯ ಕಾರ್ಯಕರ್ತರ ಸಮ್ಮೇಳನ

ಮಾನವ ಜನಾಂಗಕ್ಕೆ ಇಂದು ಸಮಾಜದಲ್ಲಿ ಆರೋಗ್ಯ ಸೇವಾ ಸೌಲಭ್ಯ ದೊರೆಯಬೇಕಾದ್ದು ಅಗತ್ಯ ಈ ದಿಸೆಯಲ್ಲಿ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ ಕಾರ್ಯಕರ್ತರು ಒಟ್ಟಾಗಿ ಸೇವಾ ಮನೋಭಾವನೆಯಿಂದ ಸಾರ್ವಜನಿಕ ಆರೋಗ್ಯ ಹಿತಕ್ಕಾಗಿ ಶ್ರಮಿಸಬೇಕೆಂದು ಕರ್ನಾಟಕ ರಾಜ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ ನಿರ್ದೇಶಕರಾದ ಡಾ॥ ಜೆ. ಎಸ್. ಸೆಕ್ಸೇನರವರು ತಿಳಿಸಿದರು.

ಶ್ರೀಯುತರು ದಿನಾಂಕ 26-10-80 ರಂದು ತುಮಕೂರಿನ ಎಂಪ್ರೆಸ್ ಬಾಲಕಿಯರ ಪ್ರೌಢಶಾಲೆಯಲ್ಲಿ ಸಮಾವೇಶಗೊಂಡಿದ್ದ ರಾಜ್ಯಮಟ್ಟದ ಆರೋಗ್ಯ ಇಲಾಖೆ ಕಾರ್ಯಕರ್ತರ ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡುತ್ತಿದ್ದರು.

ಅವರು ಮುಂದುವರಿದು ಮಾತನಾಡಿ ಆರೋಗ್ಯ ಇಲಾಖಾ ಕಾರ್ಯಕರ್ತರು ಎಲ್ಲೇ ಇರಲಿ ತಾವು ತಮ್ಮ ಕರ್ತವ್ಯನಿಷ್ಠೆಯನ್ನು ಅರಿತು ಪ್ರಾಮಾಣಿಕ ಸೇವೆ ಸಲ್ಲಿಸುವುದರ ಮೂಲಕ ತಮ್ಮ ಹಾಗೂ ಇಲಾಖೆಯ ಪ್ರಗತಿಗಾಗಿ ಶ್ರಮಿಸಿ ಸಮಾಜದಲ್ಲಿ ಮೆಚ್ಚುಗೆ ಪಡೆಯಬೇಕೆಂದರು.

ಆರೋಗ್ಯ ಇಲಾಖೆಯ ಕಾರ್ಯಕರ್ತರ ಬೇಡಿಕೆಗಳ ಬಗ್ಗೆ ಅವರು ಪ್ರಸ್ತಾಪಿಸುತ್ತಾ, ಸಮಾಜದ ಹಿತಕ್ಕಾಗಿ ದುಡಿಯುವ ವ್ಯಕ್ತಿಗಳ ಸಮಸ್ಯೆಗಳು ಸೂಕ್ತ ರೀತಿಯಲ್ಲಿ ಪರಿಹರಿಸಬೇಕಾಗಿದೆ ಈ ದೃಷ್ಟಿಯಿಂದ ಹಿರಿಯ ಅಧಿಕಾರಿಗಳು ತಮ್ಮ ಸಿಬ್ಬಂದಿ ವರ್ಗದವರ ವೈಯಕ್ತಿಕ ಕುಂದುಕೊರತೆಗಳನ್ನು ತಿಳಿದು ಅವುಗಳನ್ನು ಪರಿಹರಿಸುವಲ್ಲಿ ಮೇಲಧಿಕಾರಿಗಳು ಸಹೃದಯ ಮನೋಭಾವನೆಯಿಂದ ಕಾರ್ಯನಿರತರಾಗಬೇಕಾದ್ದು ಅಗತ್ಯವೆಂದು ಅಭಿಪ್ರಾಯಪಟ್ಟರು. ಸಮ್ಮೇಳನದ ಅಂಗವಾಗಿ ಹೊರತರಲಾದ ಸ್ಮರಣ ಸಂಚಿಕೆಯನ್ನು ಶ್ರೀಯುತರು ಬಿಡುಗಡೆ ಮಾಡಿದರು.

ಸಮ್ಮೇಳನದಲ್ಲಿ ಮಾತನಾಡಿದ ಮಣಿಪಾಲ್ ಮೆಡಿಕಲ್ ಕಾಲೇಜಿನ ಪ್ರೊಫೆಸರ್‌ರಾದ ಡಾ॥ ಪಿ. ಕೆ. ಆರ್. ವಾರಿಯರ್, ಇವರು ನೌಕರರ ಮುಖ್ಯ ಬೇಡಿಕೆಗಳ ಬಗ್ಗೆ ಪ್ರಸ್ತಾಪಿಸಿ ಇಂದು ಗಗನಕ್ಕೇರುತ್ತಿರುವ ನಿತ್ಯಬಳಕೆ ಅಗತ್ಯ ವಸ್ತುಗಳ ಹಾಗೂ ವಸತಿ ಸೌಕರ್ಯದ ವೆಚ್ಚ ಮಿತಿ ಮೀರಿ ಏರುತ್ತಿದೆ. ಈ ದೃಷ್ಟಿಯಿಂದ ನೋಡಿದಾಗ ನೌಕರರ ಜೀವನಮಟ್ಟ ಅಸ್ತವ್ಯಸ್ತವಾಗುವಂತಹ ಪರಿಸ್ಥಿತಿಯುಂಟಾಗುತ್ತಿದೆ ಈ ಪರಿಸ್ಥಿತಿಯನ್ನು ಅವಲೋಕಿಸಿ ಸರ್ಕಾರ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಮೂಲ ಬೇಡಿಕೆಗಳನ್ನು ಈಡೇರಿಸುವುದು ಅಗತ್ಯವೆಂದು ನುಡಿದರು.

ಅವರು ಮುಂದುವರಿದು ಇಂದು ಸಮಾಜದಲ್ಲಿ ಆರೋಗ್ಯ ಕಾರ್ಯಕರ್ತರ ಕರ್ತವ್ಯ ಅತಿ ಮುಖ್ಯವಾಗಿದೆ, ಅವರ ಸೇವೆಯನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವಲ್ಲಿ ಅವರುಗಳ ಸೇವಾ ನಿಯಮ ಹಾಗೂ ವೇತನ ಕ್ರಮದಲ್ಲಿ ಕಂಡುಬರುವ ನ್ಯೂನತೆಗಳನ್ನು ಸರಿಪಡಿಸುವಲ್ಲಿ ಸರಕಾರ ಸಹಾನುಭೂತಿ ತೋರಿಸಬೇಕೆಂದರು.

ಶ್ರೀಮತಿ ದೇವಿಕಾ ವಾರಿಯರ್, (ಕೇರಳ ರಾಜ್ಯ ಮಹಿಳಾ ಮಂಡಲಿಯ ಮಾಜಿ ಅಧ್ಯಕ್ಷರು) ಇವರು ಸಮ್ಮೇಳನದಲ್ಲಿ ಸಂಘಸಂಸ್ಥೆಗಳಲ್ಲಿ ಮಹಿಳೆಯರ ಪಾತ್ರವನ್ನು ಕುರಿತು ಮಾತನಾಡುತ್ತಾ, ಇಂದು ಮಹಿಳಾ ನೌಕರರು ತಮ್ಮ ಯಾವುದೇ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ತಾವು ಸಂಘಟಿತರಾಗಿ ಸಂಘ-ಸಂಸ್ಥೆಗಳ ಕಾರ್ಯಚಟುವಟಿಕೆಗಳಲ್ಲಿ ಭಾಗಿಗಳಾಗಬೇಕೆಂದರು. ನೌಕರರು ತಮ್ಮ ಮೂಲ ಸಮಸ್ಯೆಗಳನ್ನು ಸಂಬಂಧಪಟ್ಟವರ ಗಮನಕ್ಕೆ ತಂದು ಅವುಗಳನ್ನು ನಿವಾರಿಸಿಕೊಳ್ಳಲು ಸಂಘ-ಸಂಸ್ಥೆಗಳ ಕಾರ್ಯ ಪ್ರಮುಖವಾದದ್ದು. ಈ ದಿಸೆಯಲ್ಲಿ ನೌಕರರು ಸಂಘಟಿತರಾಗಿ ಕಾರ್ಯನಿರ್ವಹಿಸಲು ಇಂತಹ ಸಮ್ಮೇಳನಗಳು ಪರಿಣಾಮಕಾರಿಯಾದವುಗಳೆಂದು ಅಭಿಪ್ರಾಯಪಟ್ಟರು.

ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಉಪಾಧ್ಯಕ್ಷರಾದ ಶ್ರೀ ಪಿ. ಎಸ್. ಶ್ರೀಪತಿಯವರು ಮಾತನಾಡಿ, ಇಂದು ಗಗನಕ್ಕೇರುತ್ತಿರುವ ಅಗತ್ಯ ವಸ್ತುಗಳ ಬೆಲೆಯನ್ನು ತಡೆಗಟ್ಟುವಲ್ಲಿ ನೌಕರರ ಸಂಘಗಳು ಒಟ್ಟಾಗಿ ಸರಕಾರದೊಂದಿಗೆ ಹೋರಾಡಬೇಕೆಂದರು.

ವಿಧಾನ ಪರಿಷತ್ತಿನ ಸದಸ್ಯ ಶ್ರೀ ಎಸ್. ಮಲ್ಲಿಕಾರ್ಜುನಯ್ಯನವರು ಮಾತನಾಡಿ, ಆರೋಗ್ಯ ಸೇವಾ ಕ್ಷೇತ್ರದಲ್ಲಿ ಮಾನವೀಯತೆ ದೃಷ್ಟಿ ಮುಖ್ಯವಾದದ್ದು ಎಂದರಲ್ಲದೆ, ನೌಕರರು ಸಲ್ಲಿಸಿರುವ ಬೇಡಿಕೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳುವಂತೆ ಸರಕಾರಕ್ಕೆ ಮನವಿ ಮಾಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಜಂಟಿ ಕಾರ್ಯದರ್ಶಿ ಹಾಗೂ ಆರೋಗ್ಯ ಇಲಾಖೆ ಗುಮಾಸ್ತರ ಸಂಘದ ಗೌರವ ಅಧ್ಯಕ್ಷರಾದ ಶ್ರೀ ಎಂ. ಶಾಂತಪ್ಪನವರು ಇಲಾಖೆಯಲ್ಲಿನ ಹಲವು ನ್ಯೂನತೆಗಳ ಬಗ್ಗೆ ಮಾತನಾಡಿ ಅವುಗಳನ್ನು ಪರಿಹರಿಸಲು ಸರಕಾರಕ್ಕೆ ಮನವಿ ಮಾಡಿದರು.

ತುಮಕೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಶ್ರೀ ಟಿ. ಕೆ. ಗೋವಿಂದರಾಜುರವರು ಸಮ್ಮೇಳನದಲ್ಲಿ ಮಾತನಾಡಿದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಕೆ. ಎ. ಕೇಶವ ಮೂರ್ತಿಯವರು ಅಧ್ಯಕ್ಷ ಭಾಷಣ ಮಾಡುತ್ತಾ, ಇಂದು ಇಲಾಖೆಗಳಲ್ಲಿ ಹೊಸದಾರಿ ಹುದ್ದೆಗಳನ್ನು ಮಂಜೂರು ಮಾಡಿ ಅವುಗಳಿಗೆ ನೇಮಕ ಮಾಡುತ್ತಿರುವುದು ಶೋಚನೀಯ ಅದಕ್ಕೆ ಬದಲಾಗಿ ಬಡ್ತಿ ಸೌಲಭ್ಯವನ್ನು ಕಲ್ಪಿಸಿ ಈಗಿರುವ ನೌಕರರ ಸೇವಾ ಅವಧಿಯನ್ನು ಪರಿಗಣಿಸಿ ಅವರಿಗೆ ಸೂಕ್ತ ಭವಿಷ್ಯ ಕಲ್ಪಿಸಿಕೊಡುವುದು ಅಗತ್ಯವೆಂದರು. ಅದರಲ್ಲೂ ಸಮಾಜಕ್ಕೆ ಅಗತ್ಯ ಸೇವೆ ಸಲ್ಲಿಸುತ್ತಿರುವ ಆರೋಗ್ಯ ಕಾರ್ಯಕರ್ತರಿಗೆ ಸೌಲಭ್ಯಗಳು ಹೆಚ್ಚಿನ ರೀತಿಯಲ್ಲಿ ದೊರಕುವಂತಾಗಬೇಕು. ಇದನ್ನು ಸರಕಾರ ಮನಗಂಡು, ಬಡ್ತಿ ಹಾಗೂ ವೇತನ, ನೀಡುವಲ್ಲಿ ಹಾಗೂ ವರ್ಗಾವಣೆ ಮಾಡುವಲ್ಲಿ ನೌಕರರ ಕುಂದುಕೊರತೆಗಳನ್ನು ಕೂಲಂಕುಷವಾಗಿ ಪರಿಗಣಿಸಿ ಸೂಕ್ತಕ್ರಮಕೈಗೊಳ್ಳಬೇಕೆಂದರು ಮತ್ತು ಮೂರು ಪ್ರಮುಖ ಬೇಡಿಕೆಗಳಾದ, ನಿವೃತ್ತಿ ವಯಸ್ಸಿನ ಏರಿಕೆ, ಕೇಂದ್ರ ಸರ್ಕಾರಿ ನೌಕರರಿಗೆ ಕೊಡಲ್ಪಡುವ ತುಟ್ಟಿ ಭತ್ಯದ ಸೂತ್ರ ಮತ್ತು 15 ವರ್ಷಗಳ ಸೇವಾವಧಿಯ ನಂತರ ಮುಂಬಡ್ತಿ ಇತ್ಯಾದಿಗಳನ್ನು ತಕ್ಷಣ ಈಡೇರಿಸದೇ ಹೋದಲ್ಲಿ ಸರ್ಕಾರವು ನೌಕರರ ತೀವ್ರ ಹೋರಾಟಗಳನ್ನು ಎದುರಿಸಬೇಕಾಗುವುದೆಂದೂ ತಿಳಿಸಿದರು

ಇದೇ ಸಂದರ್ಭದಲ್ಲಿ ನೌಕರರ ಹಿತಕ್ಕಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಕೇಶವಮೂರ್ತಿ, ಶ್ರೀಪತಿ, ಶ್ರೀ ಶಾಂತಪ್ಪ ಹಾಗೂ ಶ್ರೀ ಟಿ. ಕೆ. ಗೋವಿಂದರಾಜು ಇವರುಗಳನ್ನು ಶಾಲು ಹೊದಿಸಿ ಗೌರವಿಸಲಾಯಿತು.

ಸಮ್ಮೇಳನದ ಅಂಗವಾಗಿ ಕುಟುಂಬ ಕಲ್ಯಾಣದ ಬಗ್ಗೆ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಈ ಸಮ್ಮೇಳನದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ 1232 ಪುರುಷ ಮತ್ತು ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಸಮ್ಮೇಳನದ ಉದ್ಘಾಟನೆ ಮಾಡಲು ಒಪ್ಪಿದ್ದ ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ಮಂತ್ರಿಗಳು ಗೈರು ಹಾಜರಾದದ್ದು ಸಮ್ಮೇಳನದ ಪ್ರತಿನಿಧಿಗಳು ಮತ್ತು ಕಾರ್ಯಕರ್ತರಿಗೆ ತೀವ್ರ ಜಿಗುಪ್ಸೆಗೆಡೆ ಕೊಟ್ಟಿತು. ಅಂತೂ ಅವರಿಂದ ಇದೇ ಮಾಹೆ 31ರಂದು ಸಂಘದ ಬೇಡಿಕೆಗಳನ್ನು ಚರ್ಚಿಸಲು ಕಾರ್ಯಕರ್ತರ ಸಂಘದ ಪ್ರತಿನಿಧಿಗಳ ನಿಯೋಗಕ್ಕೆ ಕರೆಬಂದಿದೆ.

ಈ ಸಮ್ಮೇಳನಕ್ಕೆ ಕೇರಳ ರಾಜ್ಯದ ಮುಖ್ಯಮಂತ್ರಿ ಕಾಂ. ನಯನಾರ್ ಮತ್ತು ಅದೇ ರಾಜ್ಯದ ರೆವಿನ್ಯೂ ಮಂತ್ರಿಗಳಾದ ಕಾಂ. ಕೆ ಆರ್. ಗೌರಿ ಇವರುಗಳಿಂದ ಯಶಸ್ಸು ಕೋರಿ ಸಂದೇಶಗಳು ಬಂದಿದ್ದವು.

ವರದಿ : ಕೆ. ಆರ್. ನಾಯಕ್

ಪ್ರಾಂತ ರೈತಸಂಘದಿಂದ

ರೈತ ಕಾರ್ಮಿಕರ ಬೃಹತ್ ರ್‍ಯಾಲಿ ನಿರ್ಧಾರ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿರುವ ಅಖಿಲ ಭಾರತ ಕಿಸಾನ್ ಸಭಾಗೆ ಸೇರ್ಪಡೆಯಾಗಿರುವ ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯ ಸಮಿತಿಯು 29-10-80 ರಂದು ಬೆಂಗಳೂರಿನಲ್ಲಿ ಸಭೆ ಸೇರಿತ್ತು. ಕಾಂ. ಹೆಚ್. ಮುಗುವಾಳಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ರೈತ ಚಳುವಳಿಗಳು, ಬೇಡಿಕೆಗಳು ಇವುಗಳನ್ನು ಸಭೆ ಕೂಲಂಕುಷವಾಗಿ ಚರ್ಚಿಸಿತು, ಹೋರಾಟಕ್ಕೆ ಬೆಂಬಲ ನೀಡಿದ ಶಿವಮೊಗ್ಗ, ಹಾಸನ, ಕೋಲಾರಗಳ ರೈತ ಸಂಘ ಘಟಕಗಳನ್ನು ಸಮಿತಿ ಅಭಿನಂದಿಸಿತು.

ಅನೇಕ ಸ್ಥಳಗಳಲ್ಲಿ ರೈತ ಚಳುವಳಿಕಾರರು ಮುಂದಿಟ್ಟಿರುವ ಬೇಡಿಕೆಗಳಲ್ಲಿ ಗ್ರಾಮೀಣ ಜನಸಂಖ್ಯೆಯ ಕೆಳಹಂತದವರ, ಎಂದರೆ ಭೂಹೀನ ಕೃಷಿಕಾರ್ಮಿಕರು ಮತ್ತು ಬಡರೈತರ ಅಗತ್ಯಗಳು ಸೇರಿಲ್ಲವೆಂದೂ ರೈತಸಂಘದ ರಾಜ್ಯ ಸಮಿತಿ ಅಭಿಪ್ರಾಯಪಟ್ಟಿತು. ಭೂಹೀನ ಬಡ ಕೃಷಿಕಾರ್ಮಿಕರಿಗೆ ಬಡ ಮತ್ತು ಮಧ್ಯಮವರ್ಗದ ರೈತರಿಗೆ ಕಾನೂನು ಮತ್ತು ಸಂಘಟನೆಯ ಗ್ಯಾರಂಟಿ ಸಿಗದಿದ್ದರೆ ಲಾಭಗಳೆಲ್ಲವನ್ನೂ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಕಸಿದುಕೊಳ್ಳುತ್ತವೆ. ರೈತರ ಚಳುವಳಿ ಇದನ್ನು ಗಮನಿಸಿ, ಕೆಳಹಂತದವರಿಗೆ ನ್ಯಾಯ ದೊರಕಿಸಬೇಕಾಗಿದೆ. "ವೇತನಗಳ ಏರಿಕೆಯ ಬೇಡಿಕೆಯು ಕೃಷಿ ಉತ್ಪನ್ನಗಳಿಗೆ ಒಳ್ಳೆಯ ಬೆಲೆ ಬೇಡಿಕೆಯ ಜೊತೆ ಹೊಂದಿಕೊಂಡಿರುವುದರಿಂದ" ಬೆಲೆ ನಿಗದಿಯು ವೇತನಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು, ಚಳುವಳಿ ಈ ಅಂಶಗಳನ್ನೂ ದೃಷ್ಟಿಯಲ್ಲಿಟ್ಟುಕೊಳ್ಳಬೇಕು ಎಂದು ಸಮಿತಿ ಅಭಿಪ್ರಾಯಪಟ್ಟಿತು. ಇದರಿಂದ ಸರ್ಕಾರದ ದಿವಾಳಿ ನೀತಿಯ ವಿರುದ್ಧ ಎಲ್ಲ ಗ್ರಾಮೀಣ ಜನತೆಯ ಐಕ್ಯತೆಯನ್ನು ಬಲಪಡಿಸಿದಂತಾಗುತ್ತದೆ. ರೈತರ ಚಳುವಳಿಯು ಪಟ್ಟಣದ ಕಾರ್ಮಿಕರನ್ನು ದೂರೀಕರಿಸಬಾರದು, ಅವರೇ ರೈತರ ನಿಜವಾದ ಸ್ನೇಹಿತರು ಎಂದು ಸಮಿತಿ ಭಾವಿಸಿತು.

ರೈತಸಂಘ ರಾಜ್ಯಸಮಿತಿಯು ರೈತರ ಚಳುವಳಿಗಳಿಗೆ ಸಂಪೂರ್ಣ ಬೆಂಬಲ ಕೊಡುತ್ತದೆ. ಕೇಂದ್ರದ ಬಂಡವಾಳಶಾಹಿ ಪಥದ ಅನುಸರಣೆಯಿಂದ ರೈತರು ದಿವಾಳಿಯಾಗುತ್ತಿದ್ದಾರೆ, ಇದರಿಂದ ಐಕ್ಯಹೋರಾಟ ರೂಪುಗೊಳ್ಳುತ್ತಿದೆ.

ಇತರ ಸಂಘಟನೆಗಳ ನೆರವಿನಿಂದ ಡಿಸೆಂಬರ್ ಹತ್ತರಂದು ರೈತಕಾರ್ಮಿಕರ ಸೌಹಾರ್ದ ರ್‍ಯಾಲಿಯನ್ನು ಬೆಂಗಳೂರಿನಲ್ಲಿ ನಡೆಸಲು ಸಭೆ ತೀರ್ಮಾನಿಸಿತು. ಬೆಂಗಳೂರು ಜಿಲ್ಲೆಯ ನೆರೆಹೊರೆಯ ಪ್ರದೇಶಗಳಿಂದ ಜಾಥಾಗಳು ಬಂದು ರ್‍ಯಾಲಿಗೆ ಸೇರುತ್ತವೆ. ರೈತರ ಚಳುವಳಿಗೆ ಬೆಂಬಲ ಕೊಡುವುದು, ಗ್ರಾಮೀಣ ಜನತೆಯ ಕೆಳಹಂತದವರ ಅಗತ್ಯ ಮತ್ತು ಸಮಸ್ಯೆಗಳ ಬಗ್ಗೆ ಸರ್ಕಾರದ ಮತ್ತು ಸಾರ್ವಜನಿಕರ ಗಮನ ಸೆಳೆಯುವುದು, ಈ ರ್‍ಯಾಲಿಯ ಉದ್ದೇಶ.

ರೈತರ ಮತ್ತು ಗ್ರಾಮೀಣ ಬಡವರ ಹೋರಾಟಗಳನ್ನು ಇನ್ನಷ್ಟು ಹೆಚ್ಚಿಸುವಂತೆ ರಾಜ್ಯಸಮಿತಿಯು ತನ್ನ ಎಲ್ಲ ಘಟಕಗಳಿಗೆ ಕರೆಕೊಟ್ಟಿದೆ, ಸರ್ಕಾರ ಅನುಸರಿಸುತ್ತಿರುವ ದಮನಕಾರಿ ನೀತಿಗಳ ಬಗ್ಗೆಯೂ ಅದು ಎಚ್ಚರಿಕೆ ಕೊಟ್ಟಿದೆ.

●

ಇತಿಹಾಸದಲ್ಲಿ ವ್ಯಕ್ತಿಯ ಪಾತ್ರ

ಚರಿತ್ರೆಯಲ್ಲಿ ವ್ಯಕ್ತಿಯ ಪಾತ್ರದ ಬಗ್ಗೆ ಮಾರ್ಕ್ಸ್‌ವಾದಕ್ಕೆ ಸರಿಯಾದ ಸಮತೋಲನವಾದ ತಿಳುವಳಿಕೆಯಿದೆ. ಆದರೂ ಸ್ಟಾಲಿನ್, ಮಾವೋರ ಬಗ್ಗೆ ವ್ಯಕ್ತಿಪಂಥಗಳು ಬೆಳೆದವು. ಈ ತಪ್ಪನ್ನು ಸರಿಪಡಿಸುವ ಪ್ರಯತ್ನಗಳೂ ನಡೆದಿವೆ. ಸ್ಟಾಲಿನ್ನರ ಬಗ್ಗೆ ಬೆಳೆದ ಈ ಪಂಥವನ್ನು ಅಳಿಸುವಾಗ ಸೋವಿಯೆತ್ ಒಕ್ಕೂಟ ತೀರ ತಪ್ಪಾದ ನಿಲುವು ತಳೆಯಿತು.

ಚೀನದಲ್ಲಿ ಈಗ ಮಾವೋ ಪಂಥದ ಪರಾಮರ್ಶೆ ನಡೆದಿದೆ. ಹಿಂದೆ ಸ್ಟಾಲಿನ್ನರಿಗೆ ಅದು ಸರಿಯಾದ ಸ್ಥಾನವನ್ನು ಕೊಟ್ಟಿತ್ತು. ಮಾವೋ ಪಂಥದ ಬಗ್ಗೆ ಸಮತೋಲ ದೃಷ್ಟಿಕೋನ ಚೀನದಲ್ಲಿ ಈಗ ಆರಂಭವಾಗಿದೆ. ಚೀನದ ಪತ್ರಿಕೆಯಲ್ಲಿ ಬಂದ ಲೇಖನದ ಸಂಗ್ರಹಾನುವಾದ ಇದು.

ಇತಿಹಾಸವನ್ನು ಸೃಷ್ಟಿಸುವವರು ಯಾರು? ಜನತೆಯೋ ಅಥವಾ ಕೆಲವು ಮಹಾನ್ ವ್ಯಕ್ತಿಗಳೋ? ಇತಿಹಾಸದಲ್ಲಿ ವ್ಯಕ್ತಿಯ ಪಾತ್ರವನ್ನು ಉತ್ಪ್ರೇಕ್ಷೆಗೊಳಿಸುವುದರಿಂದ, ವ್ಯಕ್ತಿಪಂಥವನ್ನು ಹರಡುವುದರಿಂದ ಅಥವಾ ವ್ಯಕ್ತಿಯನ್ನು ದೇವರಮಟ್ಟಕ್ಕೇರಿಸುವುದರಿಂದ ಆಗುವ ಪರಿಣಾಮಗಳೇನು?

ಚೀನದ ಕಮ್ಯುನಿಸ್ಟ್ ಪಕ್ಷದ ಹನ್ನೊಂದನೇ ಕೇಂದ್ರಸಮಿತಿಯ ಐದನೇ ಪ್ಲೀನರಿ ಅಧಿವೇಶನವು ಕಳೆದ ಫೆಬ್ರುವರಿಯಲ್ಲಿ ನಡೆಯಿತು. ಅದರಲ್ಲಿ ಬಹಳ ಪ್ರಾಮುಖ್ಯತೆಯುಳ್ಳ ಕೆಲವು ವಿಚಾರಗಳಾದ, ಕೇಂದ್ರ ನಾಯಕತ್ವವನ್ನು ಸಾಮೂಹಿಕಗೊಳಿಸುವುದು, ಜೀವನದುದ್ದಕ್ಕೂ ಕಾರ್ಯಕರ್ತ ಆಗಿರುವ ಪದ್ಧತಿಯನ್ನು ನಿಲ್ಲಿಸುವುದು, ದುಡಿಮೆ ವಿಭಜನೆಯೊಂದಿಗೆ ಸಾಮೂಹಿಕವಾಗಿ ಕೆಲಸಮಾಡುವ ಕ್ರಮವನ್ನು ಜಾರಿಗೊಳಿಸುವುದು ಮುಂತಾದುವನ್ನು ಎತ್ತಿಕೊಂಡು ಬಗೆಹರಿಸಲಾಯಿತು. ಇದು ಮೂರು ಮತ್ತು ನಾಲ್ಕನೇ ಪ್ಲೀನರಿ ಅಧಿವೇಶನಗಳ ಚೇತನದ ನೇರ ಮುಂದುವರಿಕೆ ಮತ್ತು ಬೆಳವಣಿಗೆ. ಈ ಪ್ರಶ್ನೆಗಳ ಬಗ್ಗೆ ಹೊರಡಿಸಿದ ಗೊತ್ತುವಳಿಯ ಹಿಂದಿರುವ ಮಾರ್ಗದರ್ಶಕ ಆಲೋಚನೆ, ವ್ಯಕ್ತಿಯ ಪಾತ್ರವನ್ನು ಕುರಿತ ಮಾರ್ಕ್ಸ್‌ವಾದಿ ವೈಜ್ಞಾನಿಕ ನಿಯಮನೇ.

ಇತಿಹಾಸದ ನಿರ್ಮಾಪಕರು

ವಿವಿಧ ಸಮಾಜಗಳ ಅಸ್ತಿತ್ವಕ್ಕೆ ಮತ್ತು ಪ್ರಗತಿಗೆ ಉತ್ಪಾದನಾ ವಿಧಾನವೇ ಆಧಾರಸೂತ್ರ ಎಂಬುದರಿಂದ ಮುಂದುವರಿದಾಗ, ಜನತೆಯೇ ಇತಿಹಾಸದ ನಿರ್ಮಾಪಕರು ಎಂದು ಚಾರಿತ್ರಿಕ ಭೌತವಾದಿಗಳು ಹೇಳುತ್ತಾರೆ. ಚಾರಿತ್ರಿಕವಾಗಿ ಗುಲಾಮರ ಒಡೆಯರು, ಭೂಮಾಲೀಕವರ್ಗ ಮತ್ತು ಬೂರ್ಜ್ವಾವರ್ಗ ಎಲ್ಲವೂ ಪ್ರಗತಿಶೀಲವಾದ ಚಲನಶೀಲವಾದ ಪಾತ್ರವನ್ನು ವಹಿಸಿವೆ. ಆದರೆ ಕೊನೆಯ ಹಂತದಲ್ಲಿ ಸಮಾಜದ ಬೆಳವಣಿಗೆ ನಿರ್ಧಾರವಾಗುವುದು ಉತ್ಪಾದಕ ಶಕ್ತಿಗಳಿಂದಲೇ. ಮಾನವ ಸಮಾಜದ ಚರಿತ್ರೆ, ಉತ್ಪಾದನೆಯ ಬೆಳವಣಿಗೆಯ ಚರಿತ್ರೆ, ಉತ್ಪಾದಕರ ಚರಿತ್ರೆ.

ಹಾಗಾದರೆ, ಚರಿತ್ರೆಯ ಮಹಾನ್ ವ್ಯಕ್ತಿಗಳ ಪಾತ್ರದ ಬಗ್ಗೆ ಏನು? ಮಾರ್ಕ್ಸ್‌ವಾದವು ಚರಿತ್ರೆಯಲ್ಲಿ ಮಹಾನ್ ವ್ಯಕ್ತಿಗಳ ಪಾತ್ರವನ್ನು ಅಲ್ಲಗಳೆಯುವುದಿಲ್ಲ. ಬದಲು ಅವರು ದೊಡ್ಡ ಪಾತ್ರವನ್ನು ವಹಿಸುತ್ತಾರೆಂದು ಭಾವಿಸುತ್ತದೆ. ಜನತೆಯನ್ನು ಸಂಘಟಿಸುವ, ಅವರ ಪ್ರಜ್ಞೆಯನ್ನು ಹೆಚ್ಚಿಸುವ ಮತ್ತು ಚಳವಳಿಯ ಮುಂಚೂಣಿಯಲ್ಲಿದ್ದು ಅವರ ಹೋರಾಟದ ದಿಕ್ಕನ್ನು ನಿರ್ದೇಶಿಸುವ ಅಸಾಧಾರಣ ಚಿಂತನಶೀಲರು, ರಾಜಕೀಯ ಶಾಸ್ತ್ರಜ್ಞರು ಅಥವಾ ಮಿಲಿಟರಿ ದಂಡನಾಯಕರು ಇಲ್ಲದಿದ್ದರೆ, ಇತಿಹಾಸದ ಪಥದಲ್ಲಿ ಹೋರಾಟದಲ್ಲಿ ಗೆಲುವು ಸಾಧಿಸುವುದು ಜನತೆಗೆ ಸಾಧ್ಯವಾಗದೆ ಹೋಗಬಹುದು. ಮಹಾನ್ ವ್ಯಕ್ತಿಗಳ ಪಾತ್ರ, ಚಾರಿತ್ರಿಕ ಬೆಳವಣಿಗೆಯ ವಸ್ತುನಿಷ್ಠ ಅಗತ್ಯಗಳಲ್ಲಿ ಒಂದು. ಜನತೆಯು ಹೆಚ್ಚು ಪ್ರಜ್ಞಾಪೂರ್ವಕವಾಗಿ ಇತಿಹಾಸವನ್ನು ನಿರ್ಮಿಸುತ್ತಿರುವ ಈ ಯುಗದಲ್ಲಿ, ಜನತೆಯೇ ಚರಿತ್ರೆಯ ನಿರ್ಮಾಪಕರು ಎಂಬುದನ್ನು ಒತ್ತಿ ಹೇಳುವುದರ ಜೊತೆಗೆ ರಾಜಕೀಯದ ಶೈಲಿ ಮತ್ತು ಸಾಮಾಜಿಕ ಬೆಳವಣಿಗೆಯ ನಿಯಮಗಳನ್ನು ಚೆನ್ನಾಗಿ ಬಲ್ಲ ಕಾರ್ಮಿಕ ನಾಯಕರ ಪಾತ್ರವನ್ನೂ ಒತ್ತಿ ಹೇಳಬೇಕು. ಇಲ್ಲದಿದ್ದರೆ ಗೊತ್ತಿದ್ದೋ ಗೊತ್ತಿಲ್ಲದೆಯೋ ನಾವು ಇತಿಹಾಸದ ಭೌತವಾದಿ ದೃಷ್ಟಿಕೋನದ ಪ್ರಾಮುಖ್ಯತೆಯನ್ನು ಬದಿಗೊತ್ತಿರುತ್ತೇವೆ.

ಜನತೆಯೇ ಚರಿತ್ರೆಯ ನಿರ್ಮಾಪಕರು ಎಂಬುದನ್ನು ಚಾರಿತ್ರಿಕ ಭೌತವಾದದ ಮುಖ್ಯನಿಯಮವನ್ನಾಗಿ ಎಲ್ಲ ಕ್ರಾಂತಿಕಾರಿ ಬೋಧಕರು ಒತ್ತಿ ಹೇಳಿದರೂ, ಈ ಪ್ರಶ್ನೆಯ ಬಗ್ಗೆ ಸ್ಪಷ್ಟತೆ ಪಡೆಯುವುದು ಕ್ರಾಂತಿಕಾರಿ ಚಟುವಟಿಕೆಗಳುಳ್ಳ ಜನಕ್ಕೆ ಸುಲಭವಾಗಿಲ್ಲ. ಇದು ಕಮ್ಯುನಿಸ್ಟ್ ಚಳುವಳಿಯ ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸದಿಂದ ಸಾಧಿತವಾಗಿದೆ. ಪ್ರಶ್ನೆಯ ಸಂಕೀರ್ಣತೆ ಮತ್ತು ಪ್ರಶ್ನೆಯನ್ನು ಆಡಳಿತಗಾರರು, ಆದರ್ಶವಾದಿ ಸೈದ್ಧಾಂತಿಕರು, ಚರಿತ್ರಕಾರರು ಮತ್ತಷ್ಟು ಗೊಂದಲಗೊಳಿಸಿರುವುದು ಇದಕ್ಕೆ ಕಾರಣ.

ಆದರ್ಶವಾದಿ ಕಲ್ಪನೆ :

ಮಹಾನ್ ವ್ಯಕ್ತಿಗಳೇ ಚರಿತ್ರೆಯ ಹಣೆಬರಹವನ್ನು ನಿರ್ಧರಿಸುವವರು, ಚಾರಿತ್ರಿಕ ಬೆಳವಣಿಗೆ ಆಗುವುದು ಮಹಾನ್ ವ್ಯಕ್ತಿಗಳ ಮನಸ್ಸು ಮತ್ತು ಚಟುವಟಿಕೆಗಳ ಆಧಾರದ ಮೇಲೆಯೇ. ಜಗತ್ತಿನಲ್ಲಿ ಎಲ್ಲವೂ ದೈವದಿಂದ ಸಿದ್ಧವಾಗಿವೆ ಎಂದು ಆದರ್ಶವಾದಿ ಚಾರಿತ್ರಿಕ ಕಲ್ಪನೆ ಹೇಳುತ್ತದೆ. ಇವೆಲ್ಲವೂ ಚರಿತ್ರೆಯ ನಿರ್ಮಾಪಕರು ಜನತೆಯೇ ಎಂಬುದನ್ನು ಅಲ್ಲಗಳೆಯುತ್ತವೆ. ಅನೇಕ ವೇಳೆ ನಿಜಜೀವನದಲ್ಲಿ ಈ ಎಲ್ಲ ದೃಷ್ಟಿಕೋನಗಳು ಬೆರೆತುಹೋಗಿರುತ್ತವೆ. ಇದನ್ನು ಚೀನದ ಇತಿಹಾಸದಲ್ಲಿ ಕಾಣಬಹುದು. ಚೀನದಲ್ಲಿ ಸಾಮಾನ್ಯವಾಗಿ ಜನರು ಗೊತ್ತಿದ್ದೋ ಗೊತ್ತಿಲ್ಲದೆಯೋ, ಇತಿಹಾಸದಲ್ಲಿ ವ್ಯಕ್ತಿಯ ಪಾತ್ರವನ್ನು ಉತ್ಪ್ರೇಕ್ಷಿಸುತ್ತಾರೆ. ಅದು ಹೇಗೆ ಆಗುತ್ತದೆ? ಸಾಮಾಜಿಕ ಕಾರಣಗಳಾದ ಹಳೇ ಶೋಷಕವರ್ಗಗಳ ಸಿದ್ಧಾಂತದ ಪ್ರಭಾವ, ಸಾಂಪ್ರದಾಯಿಕ ಕಲ್ಪನೆಗಳ ಪ್ರಭಾವ, ಕೆಟ್ಟ ಉದ್ದೇಶದಿಂದ ಹರಡಿದ ವಿಕೃತ ವಿಚಾರಗಳು ಇವುಗಳಿಂದ ಮಾತ್ರವಲ್ಲದೆ, ಸತ್ಯವನ್ನು ಸರಿಯಾಗಿ ಅರಿತುಕೊಳ್ಳಲಾರದ ಜನತೆಯ ಕೊರತೆಯಿಂದಲೂ ಇದು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಜನತೆಯು, ಸಮಾಜದ ಚಾರಿತ್ರಿಕ ಬೆಳವಣಿಗೆಯ ಮೂಲ ಕಾರಣಗಳನ್ನು ಮರೆತು, ಇತಿಹಾಸದ ರಂಗದ ಮೇಲೆ ದೊಡ್ಡದಾಗಿ ಕಾಣುವ ಮಹಾನ್‌ವ್ಯಕ್ತಿಗಳ ಪಾತ್ರವನ್ನೇ ಹೆಚ್ಚಾಗಿ ಕಾಣುತ್ತಾರೆ.

ನಿರ್ಧಾರಕ ಅಂಶ :

ಸಾಮಾಜಿಕ ಪ್ರಗತಿಯಲ್ಲಿ ಜಗಿತಗಳು, ಚಾರಿತ್ರಿಕ ಘಟನೆಗಳ ಬೆಳವಣಿಗೆ ಇವೆಲ್ಲವೂ ರಾಜಕೀಯ, ಆರ್ಥಿಕ ಮತ್ತು ಇತರ ಅಂಶಗಳಿಂದ ನಿರ್ಧಾರಿತವಾಗುತ್ತವೆ. ಇದರ ಮುಖ್ಯ ಕಾರಣ ಉತ್ಪಾದಕಶಕ್ತಿಗಳ ಬೆಳವಣಿಗೆ. ಈ ವಸ್ತುನಿಷ್ಠ ಸನ್ನಿವೇಶಗಳ ಆಧಾರದ ಮೇಲೆಯೇ ಮಹಾನ್‌ವ್ಯಕ್ತಿಗಳು ತಮ್ಮ ಪಾಲಿನ ಕಾಣಿಕೆಕೊಡಲು ಸಾಧ್ಯ. ಇದರ ಜೊತೆಗೆ ಮಹಾನ್ ವ್ಯಕ್ತಿಗಳು ಸ್ವತಃ ಈ ಸಾಮಾಜಿಕ ಮತ್ತು ಚಾರಿತ್ರಿಕ ಸನ್ನಿವೇಶಗಳ ಉತ್ಪನ್ನಗಳು. ಆದರೆ ಚಾರಿತ್ರಿಕ ಬೆಳವಣಿಗೆಯ ವಸ್ತುನಿಷ್ಠ ನಿಯಮಗಳು ಮತ್ತು ಮೂಲ ಕಾರಣಗಳು ಸಾಮಾಜಿಕ ಅಂಶಗಳಲ್ಲಿ ಹುದುಗಿ ಸಂಕೀರ್ಣಗೊಂಡಿರುವುದರಿಂದ, ವೈಜ್ಞಾನಿಕ ಪರಿವೀಕ್ಷಣೆಯಿಂದ ಮಾತ್ರ ಅವನ್ನು ತಿಳಿದುಕೊಳ್ಳಲು ಸಾಧ್ಯ. ಇತಿಹಾಸದ ರಂಗದ ಮೇಲೆ ಕಾರ್ಯಶೀಲವಾಗಿರುವ ಮಹಾನ್ ವ್ಯಕ್ತಿಗಳ, ಸ್ವಭಾವಗಳು, ಚಟುವಟಿಕೆಗಳು, ಪಾತ್ರಗಳು (ಅವರ ವ್ಯಕ್ತಿತ್ವದ, ಕೊಡುಗೆಗಳು ಇತರ ಆಕಸ್ಮಿಕ ಅಂಶಗಳ ಪಾತ್ರವೂ ಸೇರಿ) ಕಣ್ಣಿಗೆ ಎದ್ದು ಕಾಣುತ್ತವೆ. ಆದ್ದರಿಂದ ಸಾಮಾಜಿಕ ಮತ್ತು ಚಾರಿತ್ರಿಕ ಸನ್ನಿವೇಶಗಳಿಗೆ ಅನ್ವಯಿಸದೆ ಜನತೆ ಇದನ್ನೇ ಏಕಮುಖವಾಗಿ ನೋಡುತ್ತಾರೆ. ಚಕ್ರವರ್ತಿಗಳ, ರಾಜರ, ದಂಡನಾಯಕರ, ಮಂತ್ರಿಗಳ ಅಥವಾ ನಾಯಕರ ಮನಸ್ಸಿನ ಚಟುವಟಿಕೆಗಳೇ ಚರಿತ್ರೆ ಎಂದು ಕೂಡ ಭಾವಿಸಿಬಿಡುತ್ತಾರೆ. ಇದರಿಂದ, ಚಾರಿತ್ರಿಕ ಸನ್ನಿವೇಶಗಳನ್ನು ಗಮನಿಸದೆ ವ್ಯಕ್ತಿ ತನಗೇನುಬೇಕೋ ಅದನ್ನು ಮಾಡಬಹುದು ಎಂಬ ಅರ್ಥ ಹೊರಡುತ್ತದೆ.

ಜನತೆಯ ಬೇಡಿಕೆಗಳು ಮತ್ತು ಆಶೋತ್ತರಗಳು ಧೀಮಂತ ನಾಯಕರ ಮೂಲಕ ಹೊರಹೊಮ್ಮುತ್ತವೆ. ಚಾರಿತ್ರಿಕ ಚಳುವಳಿಗಳನ್ನು ನಾಯಕರು ಹೂಡಿ, ಸಂಘಟಿಸುತ್ತಾರೆ. ಇದರಿಂದ ಚಾರಿತ್ರಿಕ ಚಳುವಳಿಗಳ ಸಾಧನೆಗಳನ್ನು ಮಹಾನ್‌ವ್ಯಕ್ತಿಯ ಸಾಧನೆ ಎಂದು ಅನೇಕ ವೇಳೆ ಜನರು ತಿಳಿದುಬಿಡುತ್ತಾರೆ, ನಾಯಕರು ಚಾರಿತ್ರಿಕ ಸನ್ನಿವೇಶದಲ್ಲಿ ಉನ್ನತ ಸ್ಥಾನದಲ್ಲಿ ನಿಂತಿರುತ್ತಾರೆ, ಎಲ್ಲರಿಗಿಂತ ಮೊದಲು ವಿಚಾರಗಳನ್ನು ಊಹಿಸುತ್ತಾರೆ, ಸಾಮಾನ್ಯ ಜನತೆಗಿಂತ ಅವರ ಸಂಘಟನಾ ಸಾಮರ್ಥ್ಯ ಹೆಚ್ಚಾಗಿರುತ್ತದೆ ಎಂಬುದನ್ನೇನೋ ಒಪ್ಪಿಕೊಳ್ಳಬೇಕು. ಅವರು ಚಾರಿತ್ರಿಕ ಚಳುವಳಿಗಳ ಆರಂಭಕರು ಮತ್ತು ಸಂಘಟಕರು. ಚಾರಿತ್ರಿಕ "ಬಿರುಗಾಳಿ ಸಮಯ"ಗಳಲ್ಲಿ ಅವರ ಕಾಣಿಕೆ ತುಂಬ ಅನಿವಾರ್ಯವಾದುದು.

ಒಂದು ಸಮಾಜದ ಆರ್ಥಿಕ ಬೆಳವಣಿಗೆಯಲ್ಲಿ ಬದಲಾವಣೆಗೆ ಬೇಕಾದ ಪಕ್ವ ವಸ್ತುನಿಷ್ಠ ಸ್ಥಿತಿಗತಿ ಇದ್ದರೂ, ಸರಿಯಾದ ಆರಂಭಕ ಮತ್ತು ಸಂಘಟಕನ ಆಹೊತ್ತಿಗಿಲ್ಲದೆ, ಅಸಂಘಟಿತ ಜನಸಮೂಹ ತಮ್ಮ ಶಕ್ತಿಗಳನ್ನು ಒಗ್ಗೂಡಿಸಲು ಸಾಧ್ಯವಾಗಿರದೆ ಹೋಗಿರುವುದನ್ನು ಹಿಂದಿನ ಮತ್ತು ಇಂದಿನ ಸಮಾಜದಲ್ಲಿ ಕಾಣಬಹುದು. ಆದರೆ ದೊಡ್ಡ ವ್ಯಕ್ತಿಯೊಬ್ಬ ಚಾರಿತ್ರಿಕ ಬೆಳವಣಿಗೆಯನ್ನು ಮುಂದುವರೆಸಬಹುದು ಅಥವಾ ಹಿಂದುಳಿಸಬಹುದು, ಚಾರಿತ್ರಿಕ ಬದಲಾವಣೆಯ ಹೊರನೋಟದ ಭಾಗದಷ್ಟನ್ನು ನಿರ್ಧರಿಸಬಹುದು. ಚರಿತ್ರೆಯ ಹಣೆಬರಹವನ್ನು ಅಥವಾ ಒಂದು ಸನ್ನಿವೇಶದ ಸಾಧನೆಯನ್ನು ನಿಜವಾಗಿ ನಿರ್ಧರಿಸುವುದು ಜನತೆಯ ಬಲವೇ.

ಪಾತ್ರದ ಉತ್ಪ್ರೇಕ್ಷೆ :

ಆದರೆ ಜನಸಮುದಾಯವು ಅಷ್ಟು ಗಮನಾರ್ಹವಾಗಿ ಎದ್ದು ಕಾಣುವುದಿಲ್ಲ. ಏಕೆಂದರೆ ಕೀರ್ತಿ, ಸ್ಥಾನ, ಹೆಸರುಗಳಿಲ್ಲದ ಬಹುಸಂಖ್ಯಾತರು ಅವರು. ಮೌನವಾಗಿರುವ "ಚಕ್ರದ ಕಡ್ಡಿ"ಗಳಾಗಿ ಅವರು ಇರುತ್ತಾರೆ. ಆದರೆ ನಾಯಕರು ತಮ್ಮ ಅಮೂಲ್ಯ ಸೇವೆಯಿಂದ ಹೆಸರುವಾಸಿಯಾಗಿರುತ್ತಾರೆ. ಅದರಲ್ಲೂ ಜಯದೊರೆತ ಸನ್ನಿವೇಶದಲ್ಲಿ ಜನರು ನಾಯಕರ ಮೇಲೆ ಪ್ರಶಂಸೆಯ ಸುರಿಮಳೆ ಸುರಿಯುತ್ತಾರೆ. ಇದರಿಂದ ಇತಿಹಾಸ ನಿರ್ಮಿಸಿದ ಕೀರ್ತಿ ಜನತೆಗೆ ಸಲ್ಲುವುದರ ಬದಲು ಇವರಿಗೆ ಸಲ್ಲುತ್ತದೆ. ಅನೇಕರು ಎಲ್ಲ ಸಾಧನೆಗಳು, ಗೆಲುವುಗಳ ಕೀರ್ತಿಯನ್ನೂ ಜನತೆಗೆ ಕೊಡುವುದರ ಬದಲು ಒಬ್ಬ ವ್ಯಕ್ತಿಗೆ ಕೊಡುತ್ತಾರೆ.

ಒಂದು ಚಾರಿತ್ರಿಕ ಚಳುವಳಿಯಲ್ಲಿ ಅನೇಕ ಉದ್ದಾಮ ನಾಯಕರು ರೂಪುಗೊಳ್ಳುತ್ತಾರೆ. ಇವರಲ್ಲಿ ಒಬ್ಬನ ಪ್ರತಿಭೆ, ಸಾಮರ್ಥ್ಯಗಳು ಮಿಕ್ಕವರದನ್ನು ಮಸುಕುಮಾಡಬಹುದು. ಇದರಿಂದ ಅವನ ಪಾತ್ರ, ಪ್ರತಿಭೆಗಳನ್ನು ಉತ್ಪ್ರೇಕ್ಷಿಸುವಂತೆ ಆಗಬಹುದು.

ವ್ಯಕ್ತಿಯ ಪಾತ್ರವನ್ನು ಉತ್ಪ್ರೇಕ್ಷಿಸಿದಾಗ ವ್ಯಕ್ತಿಪಂಥ ಮತ್ತು ದೈವೀಕರಣ ಆರಂಭವಾಗುತ್ತದೆ. ಜನತೆ ತಮ್ಮ ನಾಯಕನ ಬಗ್ಗೆ ಹೊಂದಿದ್ದ ಸರಳ ಭಾವನೆಗಳನ್ನು ಬಳಸಿಕೊಂಡು ಲಿನ್‌ಪಿಯಾವೋ ಮತ್ತು ದುಷ್ಟಕೂಟಗಳು ಆಧುನಿಕ ಮೂಢನಂಬಿಕೆಯನ್ನು ಬೆಳೆಸಿದರು.

ಬಲವಾದ ಪಾಠಗಳು :

ಒಬ್ಬ ನಾಯಕನ ಪಾತ್ರವನ್ನು ಉತ್ಪ್ರೇಕ್ಷಿಸಿದರೆ ವ್ಯಕ್ತಿಪಂಥ (personality cult) ಬೆಳೆಯುತ್ತದೆ ಎಂಬುದನ್ನು ಕಮ್ಯುನಿಸ್ಟ್ ಚಳವಳಿ ಮತ್ತು ನಮ್ಮ ಸ್ವಂತ ಅನುಭವ ತೋರಿಸಿಕೊಟ್ಟಿದೆ.

ನಮ್ಮ ಹೋರಾಟದ ಚರಿತ್ರೆಯನ್ನು ವಿವರಿಸಲು ಮೂಢನಂಬಿಕೆಯನ್ನು ಬಳಸಿಕೊಳ್ಳುವುದು ಅನೇಕ ವರ್ಷಗಳಿಂದ ರೂಢಿಯಲ್ಲಿದೆ. ಈಗ, ಮಾರ್ಕ್ಸ್ ಹೇಳಿದಹಾಗೆ ನಾವು ಮೂಢನಂಬಿಕೆಯನ್ನು ವಿವರಿಸಲು ಇತಿಹಾಸವನ್ನು ಬಳಸಿಕೊಳ್ಳಬೇಕಾಗಿದೆ. ಒಬ್ಬ ವ್ಯಕ್ತಿಯನ್ನು ಹೇಗೆ "ದೇವ"ರನ್ನಾಗಿಮಾಡಿ ಜನ ಅವನಲ್ಲೇ ಕುರುಡುಶ್ರದ್ಧೆ ಇಡುತ್ತಾರೆ ಎಂಬುದನ್ನು ನಾವು ಚಾರಿತ್ರಿಕವಾಗಿ ತಿಳಿದುಕೊಳ್ಳಬೇಕಾಗಿದೆ. ಇದರಿಂದ ನಮ್ಮ ತಪ್ಪುಗಳಿಂದ ನಾವು ಪಾಠ ಕಲಿಯಬಹುದು

ಚಾರಿತ್ರಿಕ ಕಾಣಿಕೆ :

ಚೀನದ ಕಮ್ಯುನಿಸ್ಟರು ಮಾರ್ಕ್ಸ್‌ವಾದ ಲೆನಿನ್‌ವಾದದ ಮೂಲಗಳನ್ನು ಚೀನದ ಕ್ರಾಂತಿಯ ಅನುಭವಕ್ಕೆ ಸೇರಿಸಿ ಕ್ರಾಂತಿಕಾರಿ ಸಿದ್ಧಾಂತವನ್ನೂ ಮಾವೋ ತ್ಸೆ ತುಂಗ್ ಆಲೋಚನೆಯನ್ನೂ ಬೆಳೆಸಿದರು. 1945ರಲ್ಲಿ ನಡೆದ ಏಳನೇ ಪಕ್ಷಾಧಿವೇಶನವು ಮಾವೋತ್ಸೆತುಂಗ್ ಆಲೋಚನೆಯೇ ನಿರ್ದೇಶಕ ಸಿದ್ಧಾಂತವೆಂದು ಸ್ಥಾಪಿಸಿತು. ಪಕ್ಷದ ಬೆಳವಣಿಗೆ ಮತ್ತು ಚೀನದ ಕ್ರಾಂತಿಯ ವಿಜಯಕ್ಕೆ ಇವರ ಚಾರಿತ್ರಿಕ ಕಾಣಿಕೆ ಬಹಳವಿತ್ತು.

ಚೀನದ ಕ್ರಾಂತಿಯ ಪಥದಲ್ಲಿ ಮಾರ್ಕ್ಸ್‌ವಾದ ಲೆನಿನ್‌ವಾದವನ್ನು ಮಾವೋತ್ಸೆತುಂಗ್ ಆಲೋಚನೆ ಎಂದು ಕರೆಯುವುದು ಸರಿ. ಏಕೆಂದರೆ ಕಾಮ್ರೇಡ್ ಮಾವೋ ಅವರು ಅತ್ಯಂತ ಶ್ರೇಷ್ಠವಾದ ಮತ್ತು ಅದ್ಭುತವಾದ ಕಾಣಿಕೆಯನ್ನು ಈ ಬೆಳವಣಿಗೆಗೆ ಕೊಟ್ಟಿದ್ದಾರೆ. ಆದರೆ ಮಾವೋತ್ಸೆತುಂಗ್ ಅವರು ಮಾವೋತ್ಸೆತುಂಗ್ ಅವರ ವೈಯಕ್ತಿಕ ಪ್ರತಿಭೆಯ ಫಲ ಮಾತ್ರವೇ ಅಲ್ಲ. ಚೀನದ ಕ್ರಾಂತಿಕಾರಿ ಹೋರಾಟಗಳು ಮತ್ತು ಕಳೆದ ಅರ್ಧ ಶತಮಾನದಲ್ಲಿ ಹೊಸ ಸಮಾಜವನ್ನು ಕಟ್ಟುವ ಅನುಭವದ ಹರಳು ಅದು. ಅದು ಸಾಮೂಹಿಕ ಪ್ರತಿಭೆಯ ಹರಳುಗೊಂಡ ರೂಪವೂ ಹೌದು. ಇತರ ಶ್ರೇಷ್ಠ ಆಲೋಚನೆಗಳು ಮತ್ತು ನಿಯಮಗಳ ಸೃಷ್ಟಿಯ ಹಾಗೆ ಮಾವೋತ್ಸೆತುಂಗ್ ಆಲೋಚನೆಯೂ ಒಂದು ಚಾರಿತ್ರಿಕ ಅಗತ್ಯವೇ. ಅದರಲ್ಲಿ ರಹಸ್ಯವಾದುದೇನೂ ಇಲ್ಲ.

ಈ ಸಂದರ್ಭದಲ್ಲಿ ಮಾವೋ ತ್ಸೆ ತುಂಗ್ ಆಲೋಚನೆಯು, ಚರಿತ್ರೆಯ ಭೌತವಾದಿ ಪರಿಕಲ್ಪನೆಯ ಶೋಧನೆಗೆ ಸಮಾನವಾದುದು. ನಮ್ಮ ಪಕ್ಷವನ್ನು ಸ್ಥಾಪಿಸುವ ಸಮಯದಲ್ಲಿ, ಲಿಡ ಜಾವೋ, ಕು ಕುಬೈ, ಕೈ ಹೆಸೆನ್, ಡೆಂಗ್ ಜೊಂಗ್ಸಿಯ, ಚೌ ಎನ್ ಲೈ ಮುಂತಾದವರೂ ತಮ್ಮ ಶಕ್ತಿ ಮೀರಿ ದುಡಿದು, ಹೋರಾಟಗಳಲ್ಲಿ, ಚೀನದ ಕ್ರಾಂತಿಯನ್ನು ಅಧ್ಯಯನ ಮಾಡುವಾಗ ಮಾರ್ಕ್ಸ್‌ವಾದಿ ದೃಷ್ಟಿಕೋನವನ್ನು ಬಳಸುವುದರಲ್ಲಿ, ಅದರ ನಿಯಮಗಳನ್ನು ಅನ್ವೇಷಿಸುವಲ್ಲಿ ಸಹಾಯ ಮಾಡಿದರು. ಚೀನದ ಕ್ರಾಂತಿಯ ವಿವಿಧ ಅಂಶಗಳ ಬಗ್ಗೆ ಅವರು ಅನೇಕ ಲೇಖನಗಳನ್ನು ಬರೆದಿದ್ದಾರೆ. ಚೀನದ ಕಮ್ಯುನಿಸ್ಟರ ಸಾಮೂಹಿಕ ಹೋರಾಟಗಳ ಚಾರಿತ್ರಿಕ ಪ್ರಕ್ರಿಯೆಯೊಳಗೆ ಹುಟ್ಟಲೇಬೇಕಾಗಿದ್ದ ಕ್ರಾಂತಿಕಾರಿ ಸಿದ್ಧಾಂತವೇ ಮಾವೋ ತ್ಸೆ ತುಂಗ್ ಆಲೋಚನೆ ಎಂದು ಹೇಳಬಹುದು. ಆದರೆ ಬಹಳ ಹಿಂದಿನಿಂದಲೂ ಜನತೆಯು, ಕ್ರಾಂತಿಕಾರಿ ಸಿದ್ಧಾಂತವು ಒಬ್ಬ ವ್ಯಕ್ತಿಪ್ರತಿಭೆಯ ಸಾಧನೆ ಎಂದು ವಿವರಿಸುತ್ತಾರೆ. ಅದರಲ್ಲಿನ ಸಾಮೂಹಿಕ ಪ್ರಯತ್ನದ ಅಂಶವನ್ನು ಮರೆತುಬಿಡುತ್ತಾರೆ. ಒಬ್ಬ ಮಾಂತ್ರಿಕ ಶಕ್ತಿಯುಳ್ಳ ಸ್ವಯಂ ಸಂಪೂರ್ಣನಾದ ವ್ಯಕ್ತಿ ಬೆಳಕಿನ ದೀಪ ಹತ್ತಿಸುವವರೆಗೂ ಜನತೆ ಕತ್ತಲಲ್ಲೇ ಇದ್ದರೇನೋ ಎನ್ನುವಂತೆ ಹೇಳುತ್ತಾರೆ.

ಪ್ರಜಾಸತ್ತಾತ್ಮಕ ಕೇಂದ್ರವಾದ :

ನಮ್ಮ ಪಕ್ಷವು ಪ್ರಜಾಸತ್ತಾತ್ಮಕ ಕೇಂದ್ರವಾದದ ನಿಯಮದ ಮೇಲೆ ಸಂಘಟಿತವಾಗಿದೆ. ಈ ನಿಯಮದ ಪ್ರಕಾರ, ಪಕ್ಷದ ರಾಷ್ಟ್ರೀಯ ಅಧಿವೇಶನಗಳಲ್ಲಿ ಅಥವಾ ಪಕ್ಷದ ಕೇಂದ್ರ ಅಧಿಕಾರಾಂಗದಲ್ಲಿ ಪಕ್ಷದ ನೀತಿಯನ್ನು ಚರ್ಚಿಸಿ ರೂಪಿಸಬೇಕು. ಪಕ್ಷದ ನೀತಿಯನ್ನು ಒಬ್ಬ ವ್ಯಕ್ತಿಯು ಮುಂದಿಟ್ಟರೂ, ಚರ್ಚಿಸಿ ನಿರ್ಧಾರ ತೆಗೆದುಕೊಂಡ ಮೇಲೆಯೇ ಅದು ಪಕ್ಷದ ನೀತಿ ಎಂದು ಅನ್ನಿಸಿಕೊಳ್ಳುವುದು. ಅದು ವ್ಯಕ್ತಿರೂಪಿಸಿದ ನೀತಿ ಎನ್ನುವಂತಿಲ್ಲ ಅಥವಾ ಇಂಥ ವ್ಯಕ್ತಿಯ ರಾಜಕೀಯ ನೀತಿ ಎನ್ನುವಂತಿಲ್ಲ. ಒಬ್ಬ ವ್ಯಕ್ತಿಯ ಬಗ್ಗೆ ಇರುವ ಈ ಪ್ರಸಂಗವನ್ನು ಬಿಟ್ಟರೆ ಪಕ್ಷದ ಎಲ್ಲ ಸದಸ್ಯರೆಲ್ಲರೂ ಪಕ್ಷದ ನೀತಿಯನ್ನು ಅನುಸರಿಸುತ್ತಾರೆಯೇ ಹೊರತು ವ್ಯಕ್ತಿಯದನ್ನಲ್ಲ.

ಆದರೆ ಕಳೆದ ಕೆಲವು ವರ್ಷಗಳಲ್ಲಿ ಜನರು ಪಕ್ಷದ ನೀತಿಯನ್ನು ವ್ಯಕ್ತಿ ರೂಪಿಸಿದ್ದು ಎನ್ನುತ್ತಿದ್ದರು. ನಾಯಕನ ಪ್ರತಿಯೊಂದು ವೈಯಕ್ತಿಕ ಅಭಿಪ್ರಾಯ ಮತ್ತು ದೃಷ್ಟಿಯನ್ನು ರಾಜಕೀಯ ನೀತಿಯ ಮಟ್ಟಕ್ಕೇರಿಸುತ್ತಿದ್ದರು. ನಾಯಕ ಹೇಳಿದ್ದನ್ನು ಇಡೀ ಪಕ್ಷವೇ ಮರುಮಾತಿಲ್ಲದೆ ಅನುಸರಿಸಬೇಕು ಎಂದು ಭಾವಿಸಿದ್ದರು

ಇದರ ಫಲವಾಗಿ ಪಕ್ಷ ಜೀವನದಲ್ಲಿ ಕೆಲವು ಅಸಾಮಾನ್ಯ ಮಟ್ಟಗಳು ರೂಪುಗೊಂಡವು. ಪಕ್ಷದ ನಾಯಕತ್ವ ಎಂದರೆ ಯಾರೋ ಒಬ್ಬರ ಮಾತುಗಳಿಗೆ ವಿಧೇಯವಾದಿರುವುದು, ಪಕ್ಷದ ನೀತಿ ಎಂದರೆ ಯಾರೋ ವಿಧಿಸಿದ ಪ್ರಕಾರ ನಡೆಯುವುದು ಎಂದಾಯಿತು. ಇಡೀ ಪಕ್ಷದ ಹಂತದ ಮೇಲೆ ನಿಂತಿರುವ ಪವಿತ್ರ ಅಧಿಕಾರವೇ ಆ ವ್ಯಕ್ತಿ ಎಂದೂ ಆಯಿತು.

ಏಕಮುಖ ವಿವರಣೆ :

1920ರಲ್ಲಿ "ಲೆಫ್ಟ್ - ವಿಂಗ್" ಕಮ್ಯುನಿಸಂ, ಅನ್‌ಇನ್‌ಫಾಂಟೈಲ್ ಡಿಸ್ ಆರ್ಡರ್ ಎಂಬ ಲೇಖನದಲ್ಲಿ ಲೆನಿನ್ನರು ಹೀಗೆ ವಿವರಿಸಿದ್ದಾರೆ : "ಜನತೆಯು ಅನೇಕ ವರ್ಗಗಳಾಗಿ ವಿಭಜನೆಗೊಂಡಿದ್ದಾರೆ. ವರ್ಗಗಳ ನಾಯಕತ್ವವನ್ನು ರಾಜಕೀಯ ಪಕ್ಷಗಳು ವಹಿಸಿವೆ. ಈ ರಾಜಕೀಯ ಪಕ್ಷಗಳಲ್ಲಿ ಸಾಮಾನ್ಯವಾಗಿ ನಿರ್ದೇಶನ ನೀಡುವವರು ತುಂಬ ಅಧಿಕಾರಯುತರಾದ, ಪ್ರಭಾವಶಾಲಿಗಳಾದ ಮತ್ತು ಅನುಭವಸ್ಥರಾದ, ಮುಖ್ಯ ಸ್ಥಾನಗಳಿಗೆ ಚುನಾಯಿತರಾದ ನಿರ್ದಿಷ್ಟ ಗುಂಪಿನವರು. ಇವರೇ ನಾಯಕರು ಎಂದೂ ಕರೆಸಿಕೊಳ್ಳುತ್ತಾರೆ". ಲೆನಿನ್ ಈ ವಿಚಾರವನ್ನು ಹೇಳಿದ್ದು ತೀರ ಭಿನ್ನವಾದ ಸಂದರ್ಭದಲ್ಲಿ.

ಆದರೆ ಲೆನಿನ್ನರ ಮಾತುಗಳನ್ನು ಸರಿಯಾಗಿ ವಿವರಣೆ ನೀಡದೆ ಗ್ರಹಿಸಿಕೊಳ್ಳಲಾಗಿದೆ, ನಾಯಕತ್ವವನ್ನು ಒಬ್ಬ ವ್ಯಕ್ತಿಯೇ ನೀಡುವುದು, ಅವನೇ ಎಲ್ಲವನ್ನೂ ನಿರ್ಧರಿಸುವುದು ಎಂದು ತಿಳಿಯಲಾಗಿದೆ.

ಆಧುನಿಕ ಮೂಢನಂಬಿಕೆ :

ಒಬ್ಬ ನಾಯಕನ ಪ್ರತಿಭೆ ಅಪಾರವಾದಿದ್ದರೆ, ಅವನ ಸಿದ್ಧಾಂತ-ಒಂದಿಷ್ಟೂ ಬಿಡದೆ ಸರಿಯಾಗಿದ್ದರೆ, ಅವನ ಯೋಜನೆ ಆಮೂಲಾಗ್ರವಾದಿ ಪರಿಣಾಮಕಾರಿಯಾದಿದ್ದರೆ ಅವನ ಮಾತ್ರವೇ ಎಲ್ಲವನ್ನು ನಿರ್ಧರಿಸುವಂತಿದ್ದರೆ ಅವನು ಈ ಜಗತ್ತಿನ ಮನುಷ್ಯ ಅಲ್ಲ, ದೇವರಾಗಿಬಿಡುತ್ತಾನೆ. ದೇಶದ ಭದ್ರತೆ, ಪಕ್ಷದ ಹಣೆಬರಹ, ದೇಶದ ಭವಿಷ್ಯ ಎಲ್ಲವೂ ನಾಯಕನನ್ನು ಅವಲಂಬಿಸಿದ್ದರೆ. ನಾಯಕನಿಗೆ ವಿಧೇಯತೆ ತೋರಿ ಅವನನ್ನು ಸಮರ್ಥಿಸುವುದೇ ಇಡೀ ಪಕ್ಷದ ಮತ್ತು ಇಡೀ ಜನತೆಯ ಪವಿತ್ರ ಕರ್ತವ್ಯವಾಗಿಬಿಡುತ್ತದೆ. ಇದು ಆಧುನಿಕ ಮೂಢನಂಬಿಕೆ ಮತ್ತು ವ್ಯಕ್ತಿ ಪಂಥ ಅಲ್ಲವೆ?

ವ್ಯಕ್ತಿಪಂಥ ಬಹಳ ವರ್ಷಗಳಿಂದ ಇರುವುದರಿಂದ ನಾಯಕ ಹೇಳಿದ್ದನ್ನು ಜಾರಿಗೊಳಿಸುವುದೇ ಏಕೈಕ ಕರ್ತವ್ಯವಾಗುತ್ತದೆ. ತಮ್ಮ ಬುದ್ಧಿ ಉಪಯೋಗಿಸಿ ಸ್ವತಂತ್ರವಾದಿ ಸಮಸ್ಯೆಗಳನ್ನು ಅಧ್ಯಯನ ಮಾಡುವುದು ಅನಗತ್ಯ ಎನಿಸಿಬಿಡುತ್ತದೆ.

ನಾಯಕನಲ್ಲಿ ಅಂಧಶ್ರದ್ಧೆ ಇರುವುದರಿಂದ ಪಕ್ಷದ ಮತ್ತು ದೇಶದ ಯಾವ ನಿಯಮವೂ ನಾಯಕನಿಗೆ ಅನ್ವಯಿಸುವುದಿಲ್ಲ ಎಂದು ಜನತೆ ಭಾವಿಸುತ್ತಾರೆ. ಇದು ಆದಾಗ ಪ್ರಜಾಸತ್ತಾತ್ಮಕ ಕೇಂದ್ರವಾದ ಅಸ್ತಿತ್ವದಲ್ಲಿರುವುದಿಲ್ಲ. ವ್ಯಕ್ತಿಯೇ ದೇಶ ಮತ್ತು ಪಕ್ಷವನ್ನು ನಿಯಂತ್ರಿಸುತ್ತಾನೆ. ಅವನ ಸ್ವಭಾವ ಮತ್ತು ವ್ಯಕ್ತಿತ್ವವೇ ಪ್ರತಿ ಸನ್ನಿವೇಶದಲ್ಲೂ ಪ್ರಭಾವ ಬೀರುತ್ತದೆ. ಆಗ ತಪ್ಪುಗಳು ಅನಿವಾರ್ಯವಾಗಿ ವಿನಾಶ ತಲೆದೋರುತ್ತದೆ.

ಅವಕಾಶವಾದಿಗಳಿಂದ ಬಳಕೆ :

ವ್ಯಕ್ತಿಪಂಥವನ್ನು ಅವಕಾಶವಾದಿಗಳು ಮತ್ತು ಪಿತೂರಿಗಾರರು ಬಳಸಿಕೊಳ್ಳುತ್ತಾರೆ. ಲಿನ್‌ಪಿಯಾವೋ ವ್ಯಕ್ತಿಪಂಥವನ್ನು ಹರಡಿ ತಮ್ಮ ಪಿತೂರಿ ಕೆಲಸಗಳನ್ನು ಆರಂಭಿಸಿದರು.

ಕಾರ್ಮಿಕ ಪಕ್ಷದೊಳಗೆ ವ್ಯಕ್ತಿಪಂಥ ಹೇಗೆ ಬೆಳೆಯುತ್ತದೆ? ವ್ಯಕ್ತಿಪಂಥಕ್ಕೆ ಸಾಮಾಜಿಕ ಮತ್ತು ಸೈದ್ಧಾಂತಿಕ ಮೂಲಗಳು ಇವೆ. ಕೆಲವು ಸನ್ನಿವೇಶಗಳಲ್ಲಿ ಅದು ಕಾರ್ಮಿಕ ಪಕ್ಷದೊಳಗೆ ಬೆಳೆದು ಸಮಸ್ಯೆಯಾಗುತ್ತದೆ. ಎಲ್ಲದರ ಹಾಗೆ, ಗೆಲುವಿಗೂ ಎರಡು ಸ್ವಭಾವಗಳಿವೆ. ಪದೇಪದೇ ಸಾಧಿಸಿದ ಗೆಲುವುಗಳಿಂದ ನಾಯಕ ತನ್ನನ್ನು ತಾನೇ ಮೇಲೇರಿಸಿಕೊಳ್ಳುತ್ತಾನೆ. ತನ್ನನ್ನು ದೈವೀಕರಿಸುವ ಪ್ರಯತ್ನಗಳ ವಿರುದ್ಧ ಎಚ್ಚರಿಕೆ ಕಳೆದುಕೊಳ್ಳುತ್ತಾನೆ. ಶಿಸ್ತಾದ ಪ್ರಜಾಪ್ರಭುತ್ವವಾದಿ ವ್ಯವಸ್ಥೆ ಇಲ್ಲದಿದ್ದಾಗ ಒಬ್ಬ ವ್ಯಕ್ತಿಯೇ ಜೀವನಪರ್ಯಂತ ಒಂದು ಸ್ಥಾನದಲ್ಲಿ ಇರಬಹುದು. ಸಂಸ್ಕೃತಿ, ಆರ್ಥಿಕತೆ ಹಿಂದುಳಿದಿದ್ದಾಗ, ಊಳಿಗಮಾನ್ಯ ಪದ್ಧತಿ ಆಳವಾಗಿ ಬೇರುಬಿಟ್ಟಿರುವಾಗ ಪರಮಾಧಿಕಾರದ ವ್ಯವಸ್ಥೆ ಬರುತ್ತದೆ. ಇದರಿಂದ ವೈಯಕ್ತಿಕ ಅಧಿಕಾರವನ್ನು ಎತ್ತಿಹಿಡಿದು ಸಾಮೂಹಿಕ ಅಧಿಕಾರವನ್ನು ತಿರಸ್ಕರಿಸಲಾಗುತ್ತದೆ.

ವ್ಯಕ್ತಿಯ ವೈಭವೀಕರಣ ಬಹಳ ಕಾಲ ಸಾಮಾಜಿಕ ಅಂಶವಾದಿ ಉಳಿದಿರುತ್ತದೆ. ಈ ದುರಂತ ಮತ್ತೆ ಆಗದಂತೆ ಪ್ರಯತ್ನಿಸುವುದು ಮುಖ್ಯ. ಇದಕ್ಕೆ ಸೈದ್ಧಾಂತಿಕವಾಗಿ ವಿಚಾರಗಳನ್ನು ಸರಿಪಡಿಸಬೇಕು. ನಮ್ಮ ಅನುಭವಗಳನ್ನು ಕ್ರೋಢೀಕರಿಸಿ ರಾಜಕೀಯವಾದಿ, ಸಂಘಟನಾತ್ಮಕವಾದಿ ಪಾಠ ಕಲಿಯಬೇಕು.

●

ಪ್ರತಿಭಟನಾ ಸಭೆ

ದಿನಾಂಕ 16-10-80ರಂದು ಸಕಲೇಶಪುರದಲ್ಲಿ ಜಾರಿಗೊಳಿಸಿದ್ದ ಸಿ. ಆರ್. ಪಿ. ಸಿ.ಯ 144ನೇ ವಿಧಿಯನ್ನು ಮುರಿದು ಇಲ್ಲಿನ ನಾಗರಿಕ ಸುರಕ್ಷಾ ಸಮಿತಿಯ ಆಶ್ರಯದಲ್ಲಿ 100ಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನಾ ಸಭೆಯೊಂದನ್ನು ನಡೆಸಿದರು. ಇಂದು ಮಧ್ಯಾಹ್ನ 2 ಗಂಟೆಗೆ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಕಛೇರಿಯೆದುರಿಗೆ ನಡೆದ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದ ನಾಗರಿಕ ಸುರಕ್ಷಾ ಸಮಿತಿಯ ಸಂಚಾಲಕ ವಿ. ಸುಕುಮಾರ್‌ರವರು ಸರಕಾರಿಗೆ ಶಾಮೀಲಾದ ಪೋಲೀಸರು 144ನೇ ಸೆಕ್ಷನ್ ಜಾರಿ ಮಾಡುವುದರ ಮೂಲಕ ಪೋಲೀಸ್ ದೌರ್ಜನ್ಯದ ವಿರುದ್ಧ ಪ್ರತಿಭಟನಾ ಪ್ರದರ್ಶನ ನಡೆಯದಂತೆ ಮಾಡಿದರೆಂದರು.

ರೈತ ಕಾರ್ಮಿಕರ ಮತ್ತು ಎಲ್ಲಾ ಬಡಜನತೆಯ ಹೋರಾಟಗಳನ್ನು ಹತ್ತಿಕ್ಕಲು ಯಾವ ಶಕ್ತಿಗಳಿಂದಲೂ ಸಾಧ್ಯವಿಲ್ಲವೆನ್ನುವುದನ್ನು ಒಗ್ಗಟ್ಟಾಗಿ ಹೋರಾಡುವುದರ ಮೂಲಕ ತೋರಿಸಿಕೊಡಬೇಕಾಗಿದೆ ಎಂದು ಅವರು ನುಡಿದರು.

ನಿರಪರಾಧಿಗಳನ್ನು ಹಿಂಸಿಸುವ ಪೋಲೀಸ್ ವ್ಯವಸ್ಥೆಯ ವಿರುದ್ಧ ಸಂಘಟಿತ ಹೋರಾಟ ನಡೆಸಬೇಕೆಂದು ಅವರು ಕರೆಯಿತ್ತರು.

ಬಂಡವಾಳಿಗರ ಏಜಂಟರಾಗಿರುವ ಆಡಳಿತ ವರ್ಗ, ಕಾಂಗ್ರೆಸ್ ಗೂಂಡಗಳಿಗೆ ಶಾಮೀಲಾದ ಪೋಲೀಸರು ನ್ಯಾಯದ ಎದೆ ಮೇಲೆ ಸವಾರಿ ಮಾಡುವುದನ್ನು ನಿಲ್ಲಿಸಲು ಹೋರಾಟದಿಂದ ಮಾತ್ರ ಸಾಧ್ಯವೆಂದು ಪತ್ರಕರ್ತ ಕೆ.ಎಸ್. ಕೇಶವ ಪ್ರಸಾದ್ ನುಡಿದರು. ನಮ್ಮ ನ್ಯಾಯಯುತ ಭದ್ರತೆಗೆ ನಾವೆಲ್ಲ ಸಂಬಳ ಕೊಟ್ಟು ಇಟ್ಟುಕೊಂಡಿರುವ ವ್ಯವಸ್ಥೆಯೇ ಪೋಲೀಸ್ ಇಲಾಖೆ ಎಂದ ಅವರು ದೂರು ಕೊಡಲು ಹೋದವರನ್ನೇ ಅಕ್ರಮವಾದಿ ಬಂಧಿಸಿ ಬಟ್ಟೆ ಬಿಚ್ಚಿಸಿ ಅವಮಾನಗೊಳಿಸಿದ ಸಕಲೇಶಪುರದ ಸಬ್ ಇನ್ಸ್‌ಪೆಕ್ಟರ್ ಆನಂದ್‌ರವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕೆಂದರು.

ವಿ. ಸುಕುಮಾರ್‌ರವರು ಸುರಕ್ಷಾ ಸಮಿತಿಯ ಬೇಡಿಕೆಗಳನ್ನು ಸಭೆಯ ಮುಂದಿಟ್ಟರು. ತಾಲ್ಲೂಕು ಲೋಕದಳದ ಅಧ್ಯಕ್ಷ ಜಯರಾಜ್ ವಂದಿಸಿದರು.

ಸಭೆಯ ನಂತರ ಕಾರ್ಮಿಕರು "ಪೋಲೀಸ್ ದೌರ್ಜನ್ಯ ಕೊನೆಗೊಳ್ಳಲಿ", ಬೆಲೆಗಳು ಇಳಿಯಲಿ, "ಸರಕಾರದ ಜನವಿರೋಧಿ ನೀತಿಗೆ ಧಿಕ್ಕಾರ" "ಭ್ರಷ್ಟ ಅಧಿಕಾರಿಗಳಿಗೆ ಧಿಕ್ಕಾರ" ಮುಂತಾದ ಘೋಷಣೆಗಳನ್ನು ಕೂಗಿದರು.

ಇಂದು ಸಂಜೆ ಸೇರಿದ ನಾಗರಿಕ ಸುರಕ್ಷಾ ಸಮಿತಿಯು ತಾವು ಸಂಘಟಿಸಿದ್ದ ರೈತರ ಪ್ರತಿಭಟನಾ ಪ್ರದರ್ಶನವನ್ನು ವಿಫಲಗೊಳಿಸಲು ಪೋಲೀಸರು ಮತ್ತು ಕಾಂಗ್ರೆಸಿಯವರು ಶಾಮೀಲಾಗಿದ್ದುದನ್ನು ಖಂಡಿಸಿತು. ಯಾವುದೇ ಕ್ಷುಲ್ಲಕ ಕಾರಣಕ್ಕಾಗಿ 144ನೇ ಸೆಕ್ಷನ್ ಜಾರಿ ಮಾಡಿ ಜನಗಳಿಗೆ ಭೀತಿಯುಂಟುಮಾಡುವ ರೀತಿಯಲ್ಲಿ ("ರೈತ ಕಾರ್ಮಿಕರೇ ಮೆರವಣಿಗೆ ನಡೆಸೀರಿ ಎಚ್ಚರಿಕೆ ಶಿಕ್ಷೆಗೆ ಒಳಪಡುತ್ತೀರಿ") ಪ್ರಚಾರ ಮಾಡಿದ್ದನ್ನು ಸಭೆಯಲ್ಲಿ ತೀವ್ರವಾಗಿ ಖಂಡಿಸಲಾಯಿತು. ಇಂತಹ ಕಾನೂನು ಕ್ರಮಗಳಿಂದ ಜನತೆಯ ಹೋರಾಟಗಳನ್ನು ತಾತ್ಕಾಲಿಕವಾದಿ ತಡೆಗಟ್ಟಬಹುದೇ ಹೊರತು ಹೋರಾಟಗಳನ್ನು ದಮನ ಮಾಡಲು ಸಾಧ್ಯವಿಲ್ಲವೆಂದು ಸಭೆಯು ಆಳುವ ವರ್ಗಕ್ಕೆ ಎಚ್ಚರಿಕೆಯಿತ್ತಿತು.

●

ಚಂದಾ ವಿವರ

ಬಿಡಿಪ್ರತಿ	: 50 ಪೈಸೆ
6 ತಿಂಗಳಿಗೆ	: 13 ರೂ.
ಒಂದು ವರ್ಷಕ್ಕೆ	: 25 ರೂ.

ಕಾರ್ಮಿಕ ಇಲಾಖೆಯ ಆಫೀಸುಗಳ ಎದುರು ಸಾಮೂಹಿಕ ಸತ್ಯಾಗ್ರಹಕ್ಕೆ ಸಿ. ಐ. ಟಿ. ಯು. ರಾಜ್ಯಮಂಡಳಿ ಕರೆ

ಸಿ. ಐ. ಟಿ. ಯು. ಕರ್ನಾಟಕ ರಾಜ್ಯಮಂಡಳಿಯ ಐದನೇಯ ಸಭೆಯು ಉಡುಪಿಯಲ್ಲಿ 23ರಿಂದ 24-10-80 ರವರೆಗೆ ನಡೆಯಿತು. 23ರಂದು ಕುಂಟಿಬೆಟ್ಟುನಲ್ಲಿರುವ ಶಾರದಾ ಕಲ್ಯಾಣ ಮಂಟಪದ ಆವರಣದಲ್ಲಿ ಕಾಂ. ದೇವಿಡ್ ಕರ್ಕಡರು ಧ್ವಜಾರೋಹಣ ಮಾಡುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಪ್ರಾರಂಭದಲ್ಲಿ ದಿ. ಎ. ಕೆ. ನಾರಾಯಣರಿಗೆ ಶ್ರದ್ಧಾಂಜಲಿಯನ್ನರ್ಪಿಸಿತು. ಮಲಪ್ರಭಾ ರೈತ ಚಳುವಳಿಯಿಂದ ಪ್ರಾರಂಭವಾಗಿ ರಾಜ್ಯದ ಹಲವು ಕಡೆ ನಡೆದ ರೈತ ಚಳುವಳಿಯಲ್ಲಿ ಮತ್ತು ಬೆಲೆಏರಿಕೆಯ ವಿರುದ್ಧದ ಚಳುವಳಿಯಲ್ಲಿ ಪೋಲೀಸರ ಗೋಲಿಬಾರಿನಿಂದ ಮಡಿದ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನ ರ್ಪಿಸುವ ನಿರ್ಣಯವನ್ನು ಅಂಗೀಕರಿಸಿತು.

23ರಂದು ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಕಾಂ. ಎಸ್. ಸೂರ್ಯನಾರಾಯಣರಾಯರು, ಕಳೆದ ತಿಂಗಳು ಸೋಫಿಯಾದಲ್ಲಿ ನಡೆದ "ಶಾಂತಿಗಾಗಿ ವಿಶ್ವ ಜನತೆಯ ಸಂಸತ್, ನಿಶ್ಶಸ್ತ್ರೀಕರಣ ಕುರಿತು ಕಾರ್ಮಿಕ ಮುಖಂಡರ ದುಂಡುಮೇಜಿನ ಪರಿಷತ್‌ಗಳ ಬಗ್ಗೆಯೂ ನವೆಂಬರ್ 1 ರಿಂದ ಮಾಸ್ಕೋದಲ್ಲಿ ನಡೆದ ಡಬ್ಲ್ಯು. ಎಫ್. ಟಿ. ಯು. ಜನರಲ್ ಕೌನ್ಸಿಲ್ ಸಭೆಯ ಬಗ್ಗೆ ರಾಜ್ಯಮಂಡಳಿಗೆ ವರದಿ ಮಾಡಿದರು.

ಪ್ರಧಾನ ಕಾರ್ಯದರ್ಶಿ ಕಾಂ. ನಂಜುಂಡಪ್ಪನವರು ಕಳೆದ ಜುಲೈ 15ರ ನಂತರದ ಚಳುವಳಿ, ಹೋರಾಟ, ಸಂಘಟನೆ, ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆ ಮತ್ತು ಮುಖ್ಯವಾಗಿ ಆಗಸ್ಟ್ 18ರ ಸಾರ್ವತ್ರಿಕ ಮುಷ್ಕರದ ಬಗ್ಗೆ ಸಭೆಗೆ ವರದಿಕೊಟ್ಟರು. ಸೆಪ್ಟೆಂಬರ್ 27, 28ರಂದು ನವದೆಹಲಿಯಲ್ಲಿ ನಡೆದ ಆರು ಪಕ್ಷಗಳ ರಾಷ್ಟ್ರೀಯ ಸಮಾವೇಶದ ತೀರ್ಮಾನಗಳನ್ನು ಕಾರ್ಯದರ್ಶಿ ವಿ ಜೆ. ಕೆ. ನಾಯರ್ ವಿವರಿಸಿದರು.

ಸೆಪ್ಟೆಂಬರ್ 11 ರಿಂದ 14ರ ವರೆಗೆ ಕಣ್ಣನೂರಿನಲ್ಲಿ ನಡೆದ ಸಿ. ಐ. ಟಿ. ಯು. ಜನರಲ್ ಕೌನ್ಸಿಲ್ ಸಭೆಯ ಬಗ್ಗೆಯೂ ಕಾಂ. ನಂಜುಂಡಪ್ಪ ವರದಿ ನೀಡಿದರು ಕಾಂ. ಪಿ ರಾಮಮೂರ್ತಿಯವರ ವರದಿಯನ್ನು ಕಾಂ ಎನ್. ಕೆ. ಉಪಾಧ್ಯಾಯರು ವಿವರಿಸಿದರು.

24ರಂದು ಪ್ರಧಾನ ಕಾರ್ಯದರ್ಶಿಯವರ ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಕಾಂ. ಕೆ.ಆರ್ ನಾಯರ್ ಮತ್ತಿತರರು ಭಾಗವಹಿಸಿದ್ದರು. ವರದಿ ಅಂಗೀಕಾರವಾಯಿತು.

ರಾಜ್ಯಸರ್ಕಾರದ ಕಾರ್ಮಿಕ ಇಲಾಖೆಯು ಕಾರ್ಯನಿರ್ವಹಿಸುತ್ತಿರುವ ಶೈಲಿಯನ್ನು ಖಂಡಿಸಿದ ಸಭೆಯು ರಾಜ್ಯದಲ್ಲಿರುವ ಎಲ್ಲಾ ಸಿ. ಐ. ಟಿ ಯು ಸಂಘಗಳು ಇತ್ಯರ್ಥವಾಗದೇ ಬಾಕಿ ಉಳಿದಿರುವ ಕಾರ್ಮಿಕರ ದೂರುಗಳು ಮತ್ತು ಕೈಗಾರಿಕಾ ವಿವಾದಗಳ ಬಗ್ಗೆ, ಜಾರಿಯಾಗದೇ ಉಳಿದಿರುವ ಕನಿಷ್ಠಕೂಲಿ, ಒಪ್ಪಂದಗಳು ಮತ್ತು ಅವಾರ್ಡುಗಳ ಬಗ್ಗೆ, ಕಾರ್ಮಿಕ ಇಲಾಖೆಯ ಕಾರ್ಯಗಳಲ್ಲಿ ಆಗುತ್ತಿರುವ ಅಕ್ಷಮ್ಯ ವಿಳಂಬದ ಬಗ್ಗೆ ಕೂಡಲೇ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಪತ್ರ ಬರೆದು ನವೆಂಬರ್ 21ರಂದು ಅವರ ಕಛೇರಿಯ ಮುಂದೆ ಸಾಮೂಹಿಕ ಸತ್ಯಾಗ್ರಹ ನಡೆಸುವುದಕ್ಕಾಗಿ ತಿಳಿಸಬೇಕು ಎಂದು ತೀರ್ಮಾನಿಸಲಾಯಿತು.

ರಾಜ್ಯದ ರೈತರ ಬೇಡಿಕೆಗಳು ಮತ್ತು ಅವರ ಚಳುವಳಿಯನ್ನು ಬೆಂಬಲಿಸಲು, ಬೆಲೆಏರಿಕೆಯನ್ನು ತಡೆಯಬೇಕು ಮತ್ತು ಗಗನಕ್ಕೇರಿರುವ ಬೆಲೆಗಳನ್ನು ಇಳಿಸಬೇಕು, ಕೃಷಿಕೂಲಿಕಾರರ ಕನಿಷ್ಠ ಕೂಲಿಯನ್ನು ಹೆಚ್ಚಿಸಬೇಕು ಎಂಬ ಬೇಡಿಕೆಗಳ ಬಗ್ಗೆ ಸರ್ಕಾರವನ್ನು ಒತ್ತಾಯಿಸಲು ಇತರ ಕೇಂದ್ರ ಕಾರ್ಮಿಕ ಸಂಘಟನೆಗಳೊಂದಿಗೆ ಸಮಾಲೋಚಿಸಿ ರಾಜ್ಯಾದ್ಯಂತ ಜಂಟೀ ಚಳುವಳಿಗಳನ್ನು ಸಂಘಟಿಸಬೇಕೆಂದು ರಾಜ್ಯಮಂಡಳಿಯು ತೀರ್ಮಾನಿಸಿತು.

ನವದೆಹಲಿಯಲ್ಲಿ ನಡೆದ ಆರು ಪಕ್ಷಗಳ ರಾಷ್ಟ್ರೀಯ ಸಮಾವೇಶದ ನಿರ್ಣಯವನ್ನು ಸಿ. ಐ ಟಿ. ಯು.ಗೆ ಸೇರಿರುವ ಸಂಘಗಳು ಈ ತೀರ್ಮಾನಗಳನ್ನು ಒಪ್ಪುವ ಇತರ ಸಂಘ ಸಂಸ್ಥೆಗಳು ಮತ್ತು ಪಕ್ಷಗಳೊಂದಿಗೆ ಸೇರಿ ನವೆಂಬರ್ ತಿಂಗಳಿನಲ್ಲಿ ಪ್ರಚಾರ ಕಾರ್ಯ ನಡೆಸಬೇಕೆಂದು ಸಭೆಯು ತೀರ್ಮಾನಿಸಿತು.

ಮಂಗಳೂರಿನಲ್ಲಿ ನಡೆಯುತ್ತಿರುವ ಆಟೋರಿಕ್ಷಾ ಚಾಲಕರ ಅನ್ನಸತ್ಯಾಗ್ರಹವನ್ನು, ಅಡಿಕೆ ಮತ್ತು ಗೋಡಂಬಿ ಕಾರ್ಮಿಕರು ನಡೆಸುತ್ತಿರುವ ಚಳುವಳಿಯನ್ನು. ಕುದುರೆಮುಖದ ಎಚ್. ಎಸ್ ಸಿ ಎಲ್. ಕಾರ್ಮಿಕರು ರಿಟ್ರೆಂಚ್‌ಮೆಂಟ್ ವಿರುದ್ಧ ನಡೆಸುತ್ತಿರುವ ಚಳುವಳಿಯನ್ನು, ಹರಿಹರದ ಬಿರ್ಲಾ ಪಾಲಿಫೈಬರ್ ಸೆಕ್ಯುರಿಟ್ ಸಿಬ್ಬಂದಿ ನಡೆಸುತ್ತಿರುವ ಚಳುವಳಿಯನ್ನು. ಬೆಂಗಳೂರಿನ ಮೆಟಲ್‌ಲ್ಯಾಂಪ್ ಕ್ಯಾಪ್ಸ್ ಮತ್ತು ಮೆಗ್ನೀಷಿಯಂ ಪ್ರಾಡಕ್ಟ್ಸ್ ಕಾರ್ಮಿಕರು ನಡೆಸುತ್ತಿರುವ ಹೋರಾಟಗಳನ್ನು, ಮೈಕೋ ಮತ್ತು ಐ.ಟಿ.ಸಿ ಕಾರ್ಮಿಕರ ಬೇಡಿಕೆಗಳನ್ನು ಬೆಂಬಲಿಸುವ ವಿವಿಧ ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಹ ಬಂದಾಗ ಶರಾವತಿ ಹಂಚಿನ ಕಾರ್ಖಾನೆಯ 150 ಕಾರ್ಮಿಕರ ಮನೆಗಳು ಕೊಚ್ಚಿಹೋಗಿದ್ದು ಅವುಗಳನ್ನು ಪುನಃ ಕಟ್ಟುವುದಕ್ಕಾಗಿ ರಾಜ್ಯದ ಎಲ್ಲಾ ಕಾರ್ಮಿಕರೂ ಧನ ಸಹಾಯ ಮಾಡಬೇಕೆಂದು ಕರೆಕೊಡುವ ನಿರ್ಣಯವನ್ನು ಸಭೆ ಅಂಗೀಕರಿಸಿತು.

ರಾಷ್ಟ್ರೀಯ ಭದ್ರತಾ ಶಾಸನವನ್ನು ವಿರೋಧಿಸುವ ಪಾತೀಕರ್ ಅವಾರ್ಡಿನ ವಿರುದ್ಧ ಚಳುವಳಿ ನಡೆಸುವ ಪತ್ರಿಕಾ ನೌಕರರನ್ನು ಬೆಂಬಲಿಸುವ, ಬೆಂಗಳೂರಿನ ನಾಲ್ಕು ದಿನಪತ್ರಿಕೆಯ ಕಛೇರಿಗಳಿಗೆ ಯುವ ಕಾಂಗ್ರೆಸ್ ಗೂಂಡಾಗಳು ದಿಗ್ಬಂಧನ ಹಾಕಿದ್ದುದನ್ನು ಖಂಡಿಸಿ ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಿಸಲು ಹೋರಾಡಬೇಕೆಂದು ರಾಜ್ಯದ ಕಾರ್ಮಿಕರಿಗೆ ಕರೆಕೊಡುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

26ರಂದು ರಾಜ್ಯಮಂಡಳಿಯ ಸದಸ್ಯರನ್ನೂ ಇತರ ಆಮಂತ್ರಿತರನ್ನು ಉದ್ದೇಶಿಸಿ ಸತ್ಯಮೂರ್ತಿ ಭವನದಲ್ಲಿ ಕಾಂ ಎಂ. ರಾಮಣ್ಣರೈ ಎಂ.ಪಿ. ಮಾತನಾಡಿದರು.

ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಉಡುಪಿ ತಾಲ್ಲೂಕಿನ ಕಾರ್ಮಿಕರನ್ನು, ಮುಖಂಡರನ್ನು, ಸಿ ಐ ಟಿ.ಯು. ಹಿತೈಷಿಗಳನ್ನು ವಂದಿಸಿದರು.

ಮುಂದಿನ ರಾಜ್ಯಸಮ್ಮೇಳನವನ್ನು 1981ರ ಫೆಬ್ರವರಿಯಲ್ಲಿ ಹರಿಹರದಲ್ಲಿ ನಡೆಸಬೇಕೆಂದು ನಿಶ್ಚಯವಾಯಿತು.

26ರ ಸಂಜೆ ಉಡುಪಿಯ ರಥಬೀದಿಯಲ್ಲಿ ನಡೆದ ಬಹಿರಂಗಸಭೆಯಲ್ಲಿ ಕಾಂ. ಸಿ. ನಂಜುಂಡಪ್ಪ, ಕಾಂ. ಎನ್. ಕೆ. ಉಪಾಧ್ಯಾಯ ಮತ್ತು ಕಾಂ. ಎಂ. ರಾಮಣ್ಣರೈ ಎಂ. ಪಿ. ಭಾಷಣಮಾಡಿದರು. ಕಾಂ. ಡೇವಿಡ್ ಕರ್ಕಡ ಸ್ವಾಗತಿಸಿದರು. ಕಾಂ. ಪಿ. ರಾಮಚಂದ್ರರಾವ್ ಅಧ್ಯಕ್ಷತೆ ವಹಿಸಿದ್ದರು. ಸಭೆಗೆ ಬೀಡಿ, ಹಂಚು, ಪ್ಲೈವುಡ್ ಮತ್ತು ನೇಯ್ಗೆ ಕಾರ್ಮಿಕರು ಮೆರವಣಿಗೆ ಬಂದಿದ್ದರು.

●

ದ. ಕ. ಜಿಲ್ಲಾ ಯುವಜನ ಸಮಾವೇಶ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ ಈಗಾಗಲೇ ಅಸ್ತಿತ್ವಕ್ಕೆ ಬಂದಿರುವ ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ತಾಲೂಕು ಸಮಿತಿಗಳ ಸದಸ್ಯರ ಜಂಟಿ ಸಮಾವೇಶವೊಂದು ತಾ. 19-10-80 ರಂದು ಉಡುಪಿಯಲ್ಲಿ ಜರುಗಿತು. ಮಂಗಳೂರಿನ ಶ್ರೀ ಬಿ. ಮಾಧವ ಅವರು ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಮಲೆನಾಡು ವಲಯದ ಸಂಚಾಲಕರಾದ ಶ್ರೀ ಆನಂದ ಭಂಡಾರಿಯವರು ಸ್ವಾಗತ ಭಾಷಣ ಮಾಡುತ್ತಾ, ದ.ಕ ಜಿಲ್ಲೆಯ ಹೆಚ್ಚಿನೆಲ್ಲ ಕೇಂದ್ರಗಳಲ್ಲಿ ಈಗಾಗಲೇ ಸಂಘಟನೆಯು ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಸಂಘಟನಾ ಸಮಿತಿಯೊಂದನ್ನು ರಚಿಸಬೇಕಾಗಿರುವ ಅವಶ್ಯಕತೆಯನ್ನು ವಿವರಿಸಿದರು. ಕಾಂ. ಬಿ. ಉಮಾನಾಥ ಕಾಂ. ಬಾಲಕೃಷ್ಣ ಮಂಗಳೂರಿನ ಶೆಟ್ಟಿ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿ. ಸಂಘಟನೆಯನ್ನು ಬೆಳೆಸುವ ಕುರಿತು ತಮ್ಮ ಸೂಚನೆಗಳನ್ನು ನೀಡಿದರು.

ದ ಕ. ಜಿಲ್ಲಾ ಮಟ್ಟದ ಸಂಘಟನಾ ಸಮಿತಿಗೆ ಸಂಚಾಲಕರಾಗಿ ಕಾಂ ಬಿ ಉಮಾನಾಥ (ಮಂಗಳೂರು) ಸದಸ್ಯರಾಗಿ ಕುಂದಾಪುರದಿಂದ ಕಾಂ ಶಂಕರ್, ಕಾಂ. ಆರ್. ಜಯಕುಮಾರ್, ವಿ. ಮಹಾಬಲ, ಉಡುಪಿಯಿಂದ ಜಿ. ಸುಧಾಕರರಾವ್, ಕೆ. ರಮೇಶ್. ಬಿ ಕೆ. ಗೋಪಾಲ್ ಮಂಗಳೂರಿನಿಂದ ಆನಂದಗಟ್ಟಿ, ಯು. ಬಿ. ನಾರಾಯಣ ಮತ್ತು ರಮೇಶ್ ಉಲ್ಲಾಳ್ ಇವರನ್ನು ಸರ್ವಾನುಮತದಿಂದ ಆರಿಸಲಾಯಿತು. ತಾ. 1 2, ಮತ್ತು 3 ನವೆಂಬರ್‌ನಲ್ಲಿ ಪಂಜಾಬಿನ ಲುಧಿಯಾನಾದಲ್ಲಿ ಜರುಗಲಿರುವ ಅಖಿಲ ಭಾರತ ಯುವಜನ ಸಮಾವೇಶದಲ್ಲಿ ಭಾಗವಹಿಸಲು ದ ಕ ಜಿಲ್ಲೆಯಿಂದ ಕುಂದಾಪುರದ ಕಾಂ ಕೆ. ಶಂಕರ್ ಅವರನ್ನು ಆರಿಸಲಾಯಿತು.

●

ಬೇಡಿಕೆಗಳ ಒತ್ತಾಯಕ್ಕಾಗಿ ಗಣಿಕಾರ್ಮಿಕರ ಧರಣಿ

ಕೆ.ಜಿ.ಎಫ್.ನ ಭಾರತ ಗೋಲ್ಡ್ ಮೈನ್ಸ್ ಲಿಮಿಟೆಡ್‌ನ ಕಾರ್ಮಿಕ ಸಂಘದ ಪದಾಧಿಕಾರಿಗಳಾದ ಎಸ್. ಶವರಿದಾಸ್. ವಿ. ಜೆ. ಕೆ ನಾಯರ್. ಟಿ. ಎಸ್. ಮಣಿ, ವಿ. ಮುತ್ತುಕುಮಾರ್, ಎ. ಕಣ್ಣನ್, ಡಿ. ಪಿ ಫ್ರಾನ್ಸಿಸ್, ಎಂ. ಕೃಷ್ಣನ್. ಜಿ. ಆರ್ಥರ್. ಎಸ್. ಧನಸಿಂಗ್, ವಿ. ಆರೋಕ್ಯದಾಸ್ ಇವರನ್ನೊಳಗೊಂಡ ಗುಂಪೊಂದು ಗೋಲ್ಡ್ ಮೈನ್ಸ್ ಚೇರ್ಮನ್ನರ ಕಚೇರಿಯ ಮುಂದೆ 20-10-80ರಂದು ಧರಣಿ ನಡೆಸಿತು. ಶೇಕಡ 20ರ ಬೋನಸ್ ಹಂಚಿಕೆ, ಹೊಸ ಕಾರ್ಮಿಕರಿಗೆ ಆಸ್ಪತ್ರೆ ಧನ ಸಹಾಯ ಪರಿಷ್ಕರಣ, ಕ್ಯಾಂಟೀನ್ ಸೌಲಭ್ಯ, ಹೊಸ ವೇತನ ಪರಿಷ್ಕರಣದ ಬಗ್ಗೆ ಚರ್ಚೆ ಮುಂತಾದ ಬೇಡಿಕೆಗಳನ್ನು ಒತ್ತಾಯಿಸಲು ಧರಣಿ ಮುಷ್ಕರ ನಡೆಯಿತು. ಈ ಬಗ್ಗೆ ಅನೇಕ ಭಿತ್ತಿಪತ್ರಗಳನ್ನು ಪಟ್ಟಣದಾದ್ಯಂತ ಅಂಟಿಸಲಾಗಿತ್ತು. ಚೇರ್ಮನ್ ಶ್ರೀ ಪಿ. ಡಿ. ಗುಪ್ತ ಅವರು ಮಾತುಕತೆಗೆ ನಾಯಕರನ್ನು ಆಹ್ವಾನಿಸಿದರು. ಕಾಂ. ಎಸ್. ಶವರಿದಾಸ್, ಟಿ. ಎಸ್. ಮಣಿ ಮತ್ತು ವಿ. ಮುತ್ತುಕುಮಾರ್ ಚೇರ್‌ಮನ್ನರನ್ನು ಭೇಟಿಯಾದರು ಕಾರ್ಮಿಕರ ಮನವಿಯನ್ನು ದೆಹಲಿಗೆ ತಲುಪಿಸಲು ಗುಪ್ತ ಅವರು ಒಪ್ಪಿಕೊಂಡರು. ಅಕ್ಟೋಬರ್ ತಿಂಗಳ 29ನೇ ತಾರೀಕು ಎಲ್ಲ ಕಾರ್ಮಿಕರಿಗೆ 200ರೂ. ಬೋನಸ್ ಹಣವನ್ನು ನೀಡಲು ಅವರು ಒಪ್ಪಿದರು.

ಧರಣಿಯ ನಂತರ ಬಹಿರಂಗ ಸಭೆ ನಡೆಯಿತು. ಕಾಂ ವಿ ಜೆ. ಕೆ. ನಾಯರ್, ಟಿ. ಎಸ್. ಮಣಿ ಮತ್ತು ಎಸ್. ಶವರಿದಾಸ್ ಮಾತನಾಡಿದರು.

ದಕ್ಷಿಣ ವಲಯದ ಬೀಡಿ ಕಾರ್ಮಿಕರ ಫೆಡರೇಷನ್‌ಗಳ ಜಂಟಿ ಸಭೆ

"ಅಖಿಲ ಭಾರತ ಬೀಡಿ ಮತ್ತು ಸಿಗಾರ್ ವರ್ಕರ್ಸ್ ಫೆಡರೇಷನ್" ಕರೆಯ ಮೇರೆಗೆ ದಕ್ಷಿಣ ವಲಯದ ರಾಜ್ಯಗಳಾದ ತಮಿಳುನಾಡು, ಕೇರಳ ಮತ್ತು ಕರ್ನಾಟಕದ ಬೀಡಿ ಫೆಡರೇಷನ್‌ಗಳ ಜಂಟಿ ಸಭೆಯನ್ನು ಮಂಗಳೂರಿನ ಬೋಳಾರದಲ್ಲಿರುವ ಟೈಲ್ ವರ್ಕರ್ಸ್ ಯೂನಿಯನ್ ಆಫೀಸಿನಲ್ಲಿ ದಿನಾಂಕ 12-11-80ರ ಬೆಳಗ್ಗೆ 10 ಘಂಟೆಗೆ ಕರೆಯಲಾಗಿದೆ. ಸಭೆಗೆ ಅಖಿಲ ಭಾರತ ಬೀಡಿ ಮತ್ತು ಸಿಗಾರ್ ವರ್ಕರ್ಸ್ ಫೆಡರೇಷನ್ ಕಾರ್ಯದರ್ಶಿ ಕಾಂ ಸಿ. ಕಣ್ಣನ್ ಭಾಗವಹಿಸುತ್ತಾರೆ.

ಕರ್ನಾಟಕ ರಾಜ್ಯ ಬೀಡಿ ಫೆಡರೇಷನ್‌ನ ಎಲ್ಲ ಸದಸ್ಯರೂ ಭಾಗವಹಿಸಬೇಕಾಗಿ ವಿನಂತಿ.

—ಮಹಮ್ಮದ್ ದಸ್ತಗೀರ್
ಕಾರ್ಯದರ್ಶಿ

ಸಂಕ್ಷಿಪ್ತ ಸಮಾಚಾರಗಳು

ಗೌನಿಪಲ್ಲಿ :

ದಿನಾಂಕ 28-10-1980 ರಂದು ಶ್ರೀನಿವಾಸಪುರ ತಾಲ್ಲೂಕು ಗೌನಿಪಲ್ಲಿಯಲ್ಲಿ ಭೂಹೀನರ ಬೃಹತ್ ಮತ ಪ್ರದರ್ಶನ ನಡೆಯಿತು. ಕೋಲಾರ ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಲಕ್ಷ್ಮಣರೆಡ್ಡಿ, ತಾಲ್ಲೂಕ ರೈತಸಂಘದ ಕಾರ್ಯದರ್ಶಿ ಕಾಂ. ಮುನೀಶ್ವರಚಾರಿಯವರು ನೇತೃತ್ವವನ್ನು ವಹಿಸಿದ್ದರು. ಭೂಹೀನರಿಗೆ ಸರಕಾರಿ ಬಂಜರು ಭೂಮಿ ಹಂಚಿಕೆಯಾಗಬೇಕು, ಕೋಲಾರ ಜಿಲ್ಲೆಯನ್ನು ಕ್ಷಾಮ ಪ್ರದೇಶವೆಂದು ಸಾರಬೇಕು ಇತ್ಯಾದಿ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ನಡೆಸಿದರು.

ನಂತರ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾಂ. ಲಕ್ಷ್ಮಣರೆಡ್ಡಿ ಮಾತನಾಡಿದರು.

ಬಿಣಗಾ :

ಕಾರವಾರ ಜಿಲ್ಲೆಯ ಬಿಣಗಾದಲ್ಲಿ ದಿನಾಂಕ 27-10-80 ರಂದು ಕಾಸ್ಟಿಕ್ ಸೋಡಾ ಕಂಪನಿಯ ಯೂನಿಯನ್ನಿನ ಸರ್ವಸದಸ್ಯರ ಸಭೆ ನಡೆಯಿತು. ಗಗನಕ್ಕೇರಿರುವ ಬೆಲೆಗಳ ಅನುಗುಣವಾಗಿ, ಬೆಲೆ ಸೂಚ್ಯಂಕಕ್ಕೆ ಹೊಂದಿಕೊಂಡು ತುಟ್ಟಿಭತ್ತೆ ಕೊಡಬೇಕೆಂದು ಸಂಘದವರು ಆಡಳಿತವರ್ಗಕ್ಕೆ ಕೇಳಿಕೊಂಡಿದ್ದರು. 1-9-80 ರಂದು ಜನರಲ್ ಮ್ಯಾನೇಜರರೊಂದಿಗೆ ಸ್ವತಃ ಮಾತನಾಡಿದರೂ ಪ್ರಯೋಜನವಾಗಿಲ್ಲ. ಆಡಳಿತ ವರ್ಗದ ಹಠಮಾರಿತನದ ಧೋರಣೆಯಿಂದ ಅನಿವಾರ್ಯವಾಗಿ ಅಪಹಾರ ಚಳುವಳಿ ಹೂಡಬೇಕೆಂದು ಸಭೆ ತೀರ್ಮಾನಿಸಿತು. ಸಭೆಯನ್ನು ಉದ್ದೇಶಿಸಿ ಸಂಘದ ಪದಾಧಿಕಾರಿಗಳಾದ ಕಾಂ ಎಸ್. ಎನ್. ನಾಯಕ್ ಡಿ ಪಿ ಗಾಂವಕರ ಮತ್ತಿತರರು ಮಾತನಾಡಿದರು.

ಹೊಸಪೇಟೆ :

ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ದಿನಾಂಕ 5-10-80 ರಂದು ಎಸ್ ಎಫ್.ಐ.ನ ತಾಲ್ಲೂಕ ಮಟ್ಟದ ತಾತ್ಕಾಲಿಕ ಸಮಿತಿಯೊಂದನ್ನು ರಚಿಸಲಾಯಿತು. ಸಂಚಾಲಕರಾಗಿ ಶ್ರೀ ಹುಸೇನ್ ಸಾಹೇಬ್, ಉಪಸಂಚಾಲಕರಾಗಿ ಶ್ರೀ ವೆಂಕಟೇಶ ಅಯ್ಯಂಗಾರ್ ಹಾಗೂ ಸಮಿತಿಗೆ 10 ಜನ ಸದಸ್ಯರನ್ನು ಚುನಾಯಿಸಲಾಯಿತು.

ಈ ಸಭೆಯಲ್ಲಿ ಎಸ್.ಎಫ್ ಐ.ನ ಜಿಲ್ಲಾ ಸಂಘಟಕರಾದ ಕಾಂ. ಜಂಬಯ್ಯನಾಯಕ್ ಮತ್ತು ಡಿ ಎಸ್.ಎಸ್.ನ ಸಂಚಾಲಕ ಹುಲುಗಪ್ಪ ಗುಡ್ಡಲ ಭಾಗವಹಿಸಿದ್ದರು.

ಮಂಗಳೂರು :

ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ ಕರ್ನಾಟಕ ಮತ್ತು ಮಹಿಳಾ ಪಾಲಿಟೆಕ್ನಿಕ್‌ನ ಜಂಟಿ ಘಟಕದ ವತಿಯಿಂದ ಸರಕಾರವನ್ನು ಅಭಿನಂದಿಸುವ ಸಭೆಯು ತಾ. 16-10-80 ರಂದು ಕುಮಾರಿ ಉಮಾ ಮಹೇಶ್ವರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಬೆಂಗಳೂರಿನಲ್ಲಿ ಎಸ್ ಎಫ್. ಐ ಯ ಒಂದು ನಿಯೋಗವು ತಾಂತ್ರಿಕ ಶಿಕ್ಷಣ ನಿರ್ದೇಶಕರನ್ನು ಭೇಟಿಯಾಗಿ ಮೇಲಿನೆರಡು ಸಂಸ್ಥೆಗಳ ಎಲ್ಲ ಸಮಸ್ಯೆಗಳನ್ನು ತಿಳಿಸಿದಾಗ, ಅವುಗಳನ್ನು ಶೀಘ್ರದಲ್ಲಿ ಪರಿಶೀಲಿಸುವುದಾಗಿ ಆಶ್ವಾಸನೆ ನೀಡಿದ ನಿರ್ದೇಶಕರನ್ನೂ, ಸರಕಾರವನ್ನೂ ಸಭೆಯು ಅಭಿನಂದಿಸಿತು. ಸಮಸ್ಯೆಗಳ ಪರಿಹಾರದ ಬಗ್ಗೆ ನಿರ್ದೇಶಕರ ಅಭಿಪ್ರಾಯವನ್ನು ಘಟಕದ ಉಪಾಧ್ಯಕ್ಷ ಸತೀಶ್ ಭಂಡಾರಿಯವರು ವಿಶದಪಡಿಸಿದರು. ಸದ್ರಿ ಘಟಕದ ಅಧ್ಯಕ್ಷ ನಾಗರಾಜ ಡಿ. ಅಯಾನ್‌ರವರು ಸಮಸ್ಯೆಗಳ ಪರಿಹಾರದ ಶೀಘ್ರ ಅನುಷ್ಠಾನಕ್ಕೆ ಸರಕಾರವನ್ನು ಒತ್ತಾಯಿಸಿದರು. ಇತ್ತೀಚೆಗಷ್ಟೇ ಸಂಘಟಿತವಾದ ಘಟಕದ ಸಾಧನೆಯ ಬಗ್ಗೆ ವಿವರಿಸಿದ ಕೋಶಾಧಿಕಾರಿ ವಿಠಲ್ ಮುನಿಯಾಲ್ ರವರು ಘಟಕದ ಮುಂದಿನ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು.

ಸೀಗೆಹಟ್ಟಿ :

ಶಿವಮೊಗ್ಗ ಜಿಲ್ಲೆಯ ಸೀಗೆಹಟ್ಟಿಯಲ್ಲಿ ದಿನಾಂಕ 26-10-80 ರಂದು ಬಹಿರಂಗ ಸಭೆ ನಡೆಯಿತು. ಆರಂಭದಲ್ಲಿ ಮಾತನಾಡಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಗರ ಸಮಿತಿ ಕಾರ್ಯದರ್ಶಿ ಕಾಂ ಬಿ ಶಿ ಶೇರ್ ರವರು ಕಲ್ಪಟ್ಟ ಸ್ಮಶಾನವನ್ನು ಚೊಕ್ಕಟ ಮಾಡಿದ ನಂತರ ನಗರ ಸಭೆಯನ್ನು ಒತ್ತಾಯಿಸಿ, ಮನವಿ ಕೊಟ್ಟು 3 ತಿಂಗಳಾದರೂ ಇನ್ನೂ ಕ್ರಮ ತೆಗೆದುಕೊಳ್ಳದಿರುವುದನ್ನು ಖಂಡಿಸಿದರು, ಹಾಗು ಈ ಬಗ್ಗೆ ಕೂಡಲೇ ಗಮನ ಹರಿಸದೇ ಇದ್ದಲ್ಲಿ ತೀವ್ರ ರೀತಿಯ ಹೋರಾಟ ಮಾಡಲಾಗುವುದೆಂದು ನಗರ ಸಭೆಯನ್ನು ಎಚ್ಚರಿಸಿದರು. ಅವರು ಮುಂದುವರೆದು ಮಾತನಾಡಿ ರಾಜ್ಯದ್ಯಂತ ನಡೆಯುತ್ತಿರುವ ರೈತ ಹೋರಾಟಕ್ಕೆ, ಬೆಂಬಲ ನೀಡಬೇಕೆಂದು ಜನತೆಯಲ್ಲಿ ವಿನಂತಿಸಿದರು. ರೈತರ ಸಮಸ್ಯೆಯನ್ನು ವಿವರಿಸಿದರು.

ಕಾಂ ಕೆ.ಲಕ್ಷ್ಮೀನಾರಾಯಣ್‌ರವರು ಮಾತನಾಡಿ, ಬಂಡವಾಳಶಾಹಿ ವ್ಯವಸ್ಥೆ, ಸಮಾಜವಾದಿ ವ್ಯವಸ್ಥೆಗಳಿಗಿರುವ ವ್ಯತ್ಯಾಸ, ಬೆಲೆ ಏರಿಕೆಗೆ ಬಂಡವಾಳಶಾಹಿ ವ್ಯವಸ್ಥೆಯೊಂದಿಗೆ ಶಾಮೀಲಾಗಿರುವ ಸರ್ಕಾರವೇ ಹೊಣೆ, ಬೆಲೆ ಏರಿಕೆ ತಡೆಯಲು ಇದರ ವಿರುದ್ಧ ಹೋರಾಟ ಒಂದೇ ದಾರಿ ಎಂದು ಅಂಕಿ ಅಂಶಗಳೊಂದಿಗೆ ವಿವರಿಸಿದರು.

ಪಕ್ಷದ ಪ್ರಮುಖರಾದ ಡಾ॥ ಕೃಷ್ಣಾಜೀಯವರು ಮಾತನಾಡಿ ಆರ್ಥಿಕ ಹಾಗೂ ಸಾಮಾಜಿಕ ನ್ಯಾಯಗಳು ಸಿರಿವಂತರ ಕೆಲವೇ ಮನೆತನಗಳಿಗೆ ಸೀಮಿತವಾಗಿವೆ. ಆರ್ಥಿಕ ಹಾಗೂ ಸಾಮಾಜಿಕ, ನ್ಯಾಯ ಸಮಾನತೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಹೋರಾಟ ನಡೆಸಬೇಕೆಂದು ಅದಕ್ಕೆ ಜನತೆ ಸಂಪೂರ್ಣ ಬೆಂಬಲ ನೀಡಬೇಕೆಂದು ಮನವಿ ಮಾಡಿದರು. ಅಧ್ಯಕ್ಷತೆಯನ್ನು ಕಾಂ. ಸಿದ್ದರಾಮಣ್ಣ ವಹಿಸಿದ್ದರು.

ಶಿವಮೊಗ್ಗ :

ತಾ. 26-10-1980ನೇ ಭಾನುವಾರ ಸಾಯಂಕಾಲ 4 ಗಂಟೆಗೆ ಅಕ್ಕಿ ಗಿರಣಿ ಕೆಲಸಗಾರರ ಮತ್ತು ಹಮಾಲೀ ಕಾರ್ಮಿಕರ ಸಂಘದ ಸರ್ವಸದಸ್ಯರ ಸಭೆ ಶಿವಮೊಗ್ಗ ಕರ್ನಾಟಕ ಸಂಘ ಭವನದಲ್ಲಿ ಸೇರಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ನ್ಯಾಯವಾದಿ ಶ್ರೀ ಬಿ. ತಿರುಕಪ್ಪನವರು ವಹಿಸಿದರು, ಶ್ರೀ ಈರಪ್ಪನವರು ಎಲ್ಲರನ್ನು ಸ್ವಾಗತಿಸಿದರು. ತಾ. 22-10-80ರಂದು ಅಪಾಯಕ್ಕೀಡಾಗಿ ಮರಣ ಹೊಂದಿದ ಶ್ರೀ ಬಾಷಾ ಸಾಬ್ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸಿ ಎರಡು ನಿಮಿಷಗಳ ಕಾಲ ಎದ್ದು ನಿಂತು ಗೌರವ ಸೂಚಿಸಿದರು.

ಸಭೆಯನ್ನುದ್ದೇಶಿಸಿ ಶ್ರೀಗಳಾದ ಕಾಸಿಂಸಾಬ್, ಹೆಚ್. ನಾಗಪ್ಪ ಶಂಕರ ನಾರಾಯಣ, ಬಾಷಾಸಾಬ್, ಹೇಕ್ ಅಮೀರ್, ಹನುಮಂತಪ್ಪ, ನೂರ್ ಅಹಮ್ಮದ್ ಮುಂತಾದವರು ಮಾತನಾಡಿ ಸಂಘವನ್ನು ಬಲಪಡಿಸಲು ಕರೆ ನೀಡಿದರು

ಕಾರ್ಯದರ್ಶಿ ಕಾಂ ಚಂದುಕುಟ್ಟಿಯವರು ಸಂಘದ ಚಟುವಟಿಕೆಗಳ ಬಗ್ಗೆ ವರದಿ ಮಾಡಿದರು. ಅಕ್ಕಿ ಗಿರಣಿ ಕಾರ್ಮಿಕರ ಬೇಡಿಕೆಗಳ ಬಗ್ಗೆ ಮಾಲೀಕರ ಸಂಘದ ಜಿಲ್ಲಾಧಿಕಾರಿಗಳನ್ನು ಭೇಟಿಮಾಡಿ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿದರು. ಇತರ ಕಾರ್ಮಿಕರ ಸಂಘಗಳೊಡನೆ ಸಹಕರಿಸಿ ಅವರ ಬೇಡಿಕೆಗಳ ಬಗ್ಗೆಯೂ ನಾವು ಬೆಂಬಲ ಕೊಡಬೇಕೆಂದೂ ಕರೆ ನೀಡಿದರು.

ಅಧ್ಯಕ್ಷ ಕಾಂ. ತಿರುಕಪ್ಪನವರು ಮಾತನಾಡುತ್ತಾ ಅಸಂಘಟಿತ ಕಾರ್ಮಿಕರೆಲ್ಲರೂ ಒಗ್ಗಟ್ಟಾಗಿ ಸಂಘವನ್ನು ಬಲಪಡಿಸಬೇಕೆಂದೂ ನಮ್ಮ ಒಗ್ಗಟ್ಟನ್ನು ನಾಶಪಡಿಸಲು ಪ್ರಯತ್ನ ನಡೆಸುತ್ತಿರುವ ಕೋಮುಶಕ್ತಿಗಳ ಬಗ್ಗೆ ಎಚ್ಚರಿಕೆಯಿಂದ ವರ್ತಿಸಬೇಕೆಂದೂ ಕರೆ ನೀಡಿದರು.

ಶ್ರೀ ಸೋಮಸುಂದರಶೆಟ್ಟರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯ್ತು.

ಮಂಜೇಶ್ವರ:

ಅಕ್ಟೋಬರ್ 28ರಂದು ಮಂಜೇಶ್ವರ ರೈತಸಂಘದ ವತಿಯಿಂದ ಕುಂಜತ್ತೂರಿನಿಂದ ಕಾಂ. ಕೆ. ಕೇಶವನವರ ನೇತೃತ್ವದಲ್ಲಿ ಕಾಲ್ನಡೆ ಜಾಥಾ ಪ್ರಾರಂಭವಾಗಿ ಉದ್ಯಾವರದಿಂದ ಒಡಾಜೆ ಬಂಗ್ರಮಂಜೇಶ್ವರ ಹೊಸಂಗಡಿ ಗೇಟಿನ ಹತ್ತಿರ ಬಹಿರಂಗ ಸಭೆಯೊಂದಿಗೆ ಮುಕ್ತಾಯವಾಯಿತು. ಸಭೆಯ ಅಧ್ಯಕ್ಷತೆ ಕಾಂ. ಯು. ಕೆ. ನಾರಾಯಣನವರು ವಹಿಸಿದ್ದರು. ಮಂಜೇಶ್ವರ ಪಂಚಾಯತ್ ಅಧ್ಯಕ್ಷರಾದ ಕಾಂ. ಬಿ. ಎಂ. ರಾಮಯ್ಯ ಶೆಟ್ಟಿ ಹಾಗೂ ಬಿ. ಎಂ. ರಾಮಚಂದ್ರನವರು ಸಭೆಯನ್ನುದ್ದೇಶಿಸಿ ಮಾತನಾಡಿದ್ದರು.

ಕೈಕಂಬ :

ಅ. 28 ಗುರುಪುರ ಕೈಕಂಬದಲ್ಲಿನ ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಪ್ರಥಮ ಸಮ್ಮೇಳನವು ಅ.26ರಂದು ಜರುಗಿತು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ರಮೇಶ್ ಬಿ. ಉಳ್ಳಾಲ್ ಅವರು ವಹಿಸಿದ್ದರು. ಸಮಾರಂಭವನ್ನು ಶ್ರೀ ಯು. ಬಿ. ನಾರಾಯಣರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಆನಂದ ಗಟ್ಟಿಯವರು ಮಾತಾಡುತ್ತಾ ನಮ್ಮ ದೇಶದಲ್ಲಿ ಯುವಜನತೆ ಅನುಭವಿಸುವ ಕಷ್ಟಗಳನ್ನು ವಿವರಿಸಿದರು. ಶ್ರೀ ಬಿ. ಎಂ. ಮಾಧವನವರು ಮಾತನಾಡುತ್ತಾ ಯುವಜನತೆ ಸಂಘಟಿತರಾಗಿ ತಮ್ಮ ಸಮಸ್ಯೆಗಳನ್ನು ಅರಿತು ಅದರ ಪರಿಹಾರಕ್ಕಾಗಿ ಹೋರಾಡಬೇಕೆಂದು ಕರೆಯಿತ್ತರು. ಸಮ್ಮೇಳನದಲ್ಲಿ 28 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಮುಂದಿನ ವರ್ಷಕ್ಕೆ ಕಾಂ. ಆರ್. ದಾಮೋದರ ಅವರು ಕನ್ವೀನರ್ ಆಗಿ, ಶ್ರೀ ನಾಗೇಶ್ ಅವರನ್ನು ಜಾಯಿಂಟ್ ಕನ್ವೀನರ್ ಆಗಿರುವ 10 ಜನರ ಸಮಿತಿಯನ್ನು ರಚಿಸಲಾಯಿತು. ಶ್ರೀ ವಿ. ಪದ್ಮನಾಭರು ಸ್ವಾಗತಿಸಿ ಕೊನೆಯಲ್ಲಿ ಧನ್ಯವಾದವಿತ್ತರು.

ನೆಲ್ಲಿ ತೀರ್ಥ

ಅ. 28 ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಶಾಖೆಯನ್ನು ಕೊಂಪದವು ಗ್ರಾಮದ ನೆಲ್ಲಿ ತೀರ್ಥದಲ್ಲಿ ಅ. 12ರಂದು ಮಂಗಳೂರು ತಾಲ್ಲೂಕು ಯುವಜನ ಸಂಘಟನೆಯ ಸಂಚಾಲಕ ಶ್ರೀ ಬಿ. ಉಮಾನಾಥರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಉಮೇಶ್ ಶ್ರೀಯಾನ್‌ರವರು ಮುಖ್ಯ ಅತಿಥಿಯಾಗಿದ್ದರು ಮುಂದಿನ ವರ್ಷಕ್ಕೆ ಶ್ರೀ ಎನ್. ವಾಸುದೇವ ಕನ್ವೀನರ್ ರಮಾನಂದ ಜಾಯಿಂಟ್ ಕನ್ವೀನರ್ ಆಗಿರುವ 15 ಜನರ ಸಮಿತಿಯನ್ನು ರಚಿಸಲಾಯಿತು, ಕೊನೆಯಲ್ಲಿ ಶ್ರೀ ವಿ. ಪದ್ಮನಾಭರು ವಂದನಾರ್ಪಣೆಗೈದರು,

●

ಮುಳುಬಾಗಿಲು ತಾಲ್ಲೂಕಿನಲ್ಲಿ ರೈತರ ಚಳುವಳಿ

ದಿನಾಂಕ 27-10-80ರ ಸೋಮವಾರ ತಾಲ್ಲೂಕು ರೈತಸಂಘದ ಆಶ್ರಯದಲ್ಲಿ ಮುಳಬಾಗಿಲು ರೈತರ ಬೃಹತ್ ಮತಪ್ರದರ್ಶನ ನಡೆಸಲಾಯಿತು. ಕ್ಷಾಮ ಪರಿಹಾರ ಕೊಡಬೇಕು, ನೀರು ತೆರಿಗೆ ರದ್ದುಮಾಡಬೇಕು ಎಂಬ ಘೋಷಣೆಗಳೊಂದಿಗೆ ಬೃಹತ್ ಮೆರವಣಿಗೆ ನಡೆಸಿದ ನಂತರ ರೈತಸಂಘದ ಕಾರ್ಯಕರ್ತರು, ಜಿಲ್ಲಾ ರೈತಸಂಘದ ಉಪಾಧ್ಯಕ್ಷರಾದ ಕಾಂ. ಆರ್. ವೆಂಕಟರಾಮಯ್ಯನವರ ನೇತೃತ್ವದಲ್ಲಿ ತಹಸೀಲ್ದಾರ್ ಆಫೀಸ ಎದುರು ಪಿಕೆಟಿಂಗ್ ನಡೆಸಿದರು. ಪೋಲೀಸರು 104 ಜನರನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ನಂತರ ತಾಲ್ಲೂಕು ಆಫೀಸ ಮುಂದೆ ನಡೆದ ಬಹಿರಂಗ ಸಭೆ ನಡೆಯಿತು. ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಎಚ್. ಮುಗುವಾಳಪ್ಪ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಕಾಂ. ಆರ್. ವೆಂಕಟರಾಮಯ್ಯ, ನಾಗಿರೆಡ್ಡಿ, ಎಸ್. ಎಫ್. ಐ ನ ಶಿವಾನಂದ ಲಕ್ಷ್ಮಣರೆಡ್ಡಿ ಮುಂತಾದವರು ಮಾತನಾಡಿ, ಜಿಲ್ಲೆಯು ತೀವ್ರ ಅಭಾವಕ್ಕೆ ಸಿಕ್ಕಿದ್ದರೂ ಸರ್ಕಾರ ಜಿಲ್ಲೆಯನ್ನು ನಿರ್ಲಕ್ಷಿಸಿರುವ ನೀತಿಯನ್ನು ತೀವ್ರವಾಗಿ ಖಂಡಿಸಲಾಯಿತು.

28-10-80ರಂದೂ ಚಳುವಳಿ ಮುಂದುವರಿಯಿತು. ಅಂದೂ ಕೂಡ ರೈತರು ತೆಗೆದ ಬೇಡಿಕೆಗಳನ್ನು ಕೂಗುತ್ತಾ ಮೆರವಣಿಗೆ ತೆಗೆದರು. ನಂತರ ತಹಸೀಲ್ದಾರರ ಆಫೀಸಿನ ಎದುರು ನಡೆದ ಪಿಕೆಟಿಂಗ್‌ನ ನೇತೃತ್ವವನ್ನು ಕಾಂ. ನಾಗಿರೆಡ್ಡಿ ವಹಿಸಿದ್ದರು. ಪೋಲೀಸರು 206 ಕಾರ್ಯಕರ್ತರನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಇದಕ್ಕೆ ಮೊದಲು ರೈತಚಳುವಳಿಯನ್ನು ಬೆಂಬಲಿಸುವ ಬಹಿರಂಗ ಸಭೆ ನಡೆಯಿತು. ತಾಲ್ಲೂಕು ರೈತಸಂಘದ ಅಧ್ಯಕ್ಷ ಕಾಂ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು ಸಭೆಯಲ್ಲಿ ಬೀಡಿಕಾರ್ಮಿಕರ ನಾಯಕ ಅಬ್ದುಲ್ ಮಜೀದ್ ಕೆ. ವಿ. ಶಂಕರಯ್ಯ, ಅಜ್ಜಪ್ಪನಯ್ಯ, ನಾಗಿರೆಡ್ಡಿ ಮತ್ತು ಕಾಂ. ವೆಂಕಟರಾಮಯ್ಯ ಮಾತನಾಡಿ, ಸರಕಾರ ತುರ್ತುಪರಿಹಾರಗಳನ್ನು ನೀಡಲು ಮುಂದಾಗದಿದ್ದಲ್ಲಿ ಚಳುವಳಿಯನ್ನು ತೀವ್ರಗೊಳಿಸುವ ಎಚ್ಚರಿಕೆ ನೀಡಿದರು.

ಕಾಂಗ್ರೆ ಕೋಟೆ ಬಿರುಕು ಬಿಡುತ್ತಿದೆ

[ಒಂದನೇ ಪುಟದಿಂದ]

ಪತ್ರಿಕ್ಕೆಲು ಸರ್ಕಾರವು ಯತ್ನಿಸುತ್ತಿದೆ ಎಂದು ಕೇಂದ್ರ ಸರಕಾರವನ್ನು ಟೀಕಿಸಿದರು.

ರಾಷ್ಟ್ರದ ಈಗಿನ ಸಂಕಷ್ಟಗಳಿಗೆ ಹಿಂದಿನ ಜನತಾ ಪಕ್ಷದ ಆಡಳಿತವು ಕಾರಣ ಎಂದು ಇದುವರೆಗೆ ಹೇಳಿಕೊಂಡು ಬಂದ ಇಂದಿರಾಗಾಂಧಿಯವರು ಈ ಪಾರ್ಲಿಮೆಂಟರಿ ಪ್ರಜಾಸತ್ತೆಯಲ್ಲಿ ದೋಷ ಅಡಗಿದೆ ಎಂದು ಹೇಳಲು ಶುರುಮಾಡಿದ್ದಾರೆ. ಪಾರ್ಲಿಮೆಂಟರಿ ಪ್ರಜಾಸತ್ತೆಯನ್ನು ಕಿತ್ತುಹಾಕಿ ಅಧ್ಯಕ್ಷೀಯ ಮಾದರಿ ವ್ಯವಸ್ಥೆಯನ್ನು ತರಲು ಅವರು ಪ್ರಯತ್ನಿಸುತ್ತಿದ್ದಾರೆ. ಈ ಪ್ರಯತ್ನವು ದಿಲ್ಲಿಯ ವಕೀಲರುಗಳ ಸಮ್ಮೇಳನದಲ್ಲಿ ಸ್ಪಷ್ಟವಾಗಿ ವ್ಯಕ್ತಗೊಂಡಿದ್ದು ಸಮ್ಮೇಳನವನ್ನು ಸ್ವಯಂ ಪ್ರಧಾನಿಯವರೇ ಉದ್ಘಾಟಿಸಿದ್ದಾರೆ ಎಂದು ಕಾಂ. ಸಮರ್ ಮುಖರ್ಜಿ ಹೇಳಿದ್ದಾರೆ.

ಈಗಿರುವ ಸಂಸದೀಯ ಪ್ರಜಾಸತ್ತೆಯಲ್ಲಿ ಸರಕಾರವು ಸಂಸತ್ತಿಗೆ ಜವಾಬ್ದಾರಿಯಾಗಿರುತ್ತದೆ. ಆದರೆ ಅಧ್ಯಕ್ಷೀಯ ಪದ್ಧತಿಯಲ್ಲಿ ರಾಷ್ಟ್ರಾಧ್ಯಕ್ಷರು ಯಾರಿಗೂ ಜವಾಬ್ದಾರಿಯಿಲ್ಲದ ಸರ್ವಾಧಿಕಾರಿಯಾಗಲು ಸಾಧ್ಯ. ಇಂತಹ ವ್ಯವಸ್ಥೆಯೊಂದನ್ನು ತಂದು ತಾನು ರಾಷ್ಟ್ರಾಧ್ಯಕ್ಷೆಯಾಗಿ ಎಲ್ಲ ಅಧಿಕಾರಿಗಳನ್ನು ತನ್ನ ಕೈಯಲ್ಲಿ ಹಿಡಿದುಕೊಳ್ಳಬೇಕೆಂದು ಹೊರಟಿರುವ ಇಂದಿರಾಗಾಂಧಿಯ ಪಿತೂರಿಯ ವಿರುದ್ಧ ನಾಡಿನ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಪ್ರಬಲ ಪ್ರತಿಭಟನೆ ತೋರಿಸಬೇಕೆಂದು ಕರೆ ನೀಡಿದರು.

ವಿರೋಧ ಪಕ್ಷಗಳ ಸರ್ಕಾರ ಉರುಳಿಸಲು :

ಪ. ಬಂಗಾಳ, ಕೇರಳ, ತ್ರಿಪುರ ರಾಜ್ಯಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಸರ್ಕಾರಗಳನ್ನು ಹೇಗಾದರೂ ಮಾಡಿ ಉರುಳಿಸಬೇಕೆಂದು ಕೇಂದ್ರ ಸರ್ಕಾರವು ಪ್ರಯತ್ನಿಸುತ್ತಿದೆ ಎಂದು ಆಪಾದಿಸಿದ ಕಾಂ. ಸಮರ್ ಮುಖರ್ಜಿಯವರು, "ಸಿ. ಪಿ. ಎಂ. ಬಂಗಾಳ ಬಿಟ್ಟು ತೊಲಗಲಿ" ಎಂಬ ಕಾಂಗ್ರೆಸ್ಸಿನ ಪ. ಬಂಗಾಳ ಘಟಕದ ಚಳುವಳಿಯು ಇದಕ್ಕೆ ಸ್ಪಷ್ಟ ನಿದರ್ಶನವೆಂದರು.

ಸಾರ್ವಜನಿಕ ವಿತರಣಾ ಪದ್ಧತಿಯ ಮೂಲಕ ಬಡಜನತೆಗೆ ನ್ಯಾಯಬೆಲೆಯಲ್ಲಿ ಆಹಾರಧಾನ್ಯಗಳನ್ನು ಒದಗಿಸುವ ವ್ಯವಸ್ಥೆಯನ್ನು ನಿರ್ಮಾಣ ಮಾಡಿರುವ ಪ. ಬಂಗಾಳ ಮತ್ತು ಕೇರಳ ರಾಜ್ಯಸರಕಾರಗಳಿಗೆ ಕೇಂದ್ರ ಸರ್ಕಾರವು ಸಾಕಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುತ್ತಿಲ್ಲ ಎಂದು ಕಾಂ ಸಮರ ಮುಖರ್ಜಿ ಆಪಾದಿಸಿದರು, ಅಗತ್ಯವಸ್ತುಗಳ ಸಗಟು ವ್ಯಾಪಾರವನ್ನು ಸರಕಾರವು ತನ್ನ ಕೈಗೆ ತೆಗೆದುಕೊಂಡು ರೈತರಿಗೆ ನ್ಯಾಯಬೆಲೆ ಕೊಡುವುದರ ಮೂಲಕ ರೈತರನ್ನು ರಕ್ಷಿಸಬೇಕು ಮತ್ತು ಬಳಕೆದಾರರಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ನ್ಯಾಯಬೆಲೆಯಲ್ಲಿ ಅಗತ್ಯ ವಸ್ತುಗಳನ್ನು ಒದಗಿಸಬೇಕೆಂದು ಕೇಂದ್ರ ಸರಕಾರವನ್ನು ಕಾಂ. ಮುಖರ್ಜಿ ಒತ್ತಾಯಿಸಿದರು. ಈ ಕಾರ್ಯಕ್ರಮಕ್ಕೆ ಚಳುವಳಿಯನ್ನು ನಮ್ಮ ಪಕ್ಷ ಸಂಘಟಿಸುವುದೆಂದೂ ಸಹ ಅವರು ತಿಳಿಸಿದರು.

ನಕ್ಸಲೀಯರೊಂದಿಗೆ ರಾಜಕೀಯ ಹೋರಾಟ :

ದೇಶದ ವಿವಿಧ ಕಡೆಗಳಲ್ಲಿ ನಕ್ಸಲೀಯರನ್ನು ಬಲಪ್ರಯೋಗದ ಮೂಲಕ ಹತ್ತಿಕ್ಕಲಾಗುತ್ತಿರುವುದನ್ನು ತಮ್ಮ ಪಕ್ಷವು ಒಪ್ಪುವುದಿಲ್ಲ ಎಂದು ಹೇಳಿದ ಅವರು, ನಕ್ಸಲೀಯರೊಂದಿಗೆ ರಾಜಕೀಯವಾಗಿ ಹೋರಾಡಬೇಕೆಂದು ಹೇಳಿದರು.

ಪ್ರಬಲ ಪರ್ಯಾಯ

ಆಳುವ ಪಕ್ಷದ ಕಾರ್ಯನೀತಿಯ ವಿರುದ್ಧ ಬೇಸತ್ತಿರುವ ಜನರು ಮತ್ತು ವಿರೋಧ ಪಕ್ಷಗಳು ಒಂದಾಗುತ್ತಿವೆ ಎಂದು ಹೇಳಿದ ಕಾಂ. ಮುಖರ್ಜಿ ದಿಲ್ಲಿಯಲ್ಲಿ ನಡೆದ ಆರು ವಿರೋಧ ಪಕ್ಷಗಳ ಸಮಾವೇಶ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಲ್ಲಿ ಬೆಲೆ ಏರಿಕೆ ವಿರುದ್ಧ ನಡೆದ ಯಶಸ್ವಿ ಬಂದ್ ಕಾರ್ಯಕ್ರಮಗಳು ಇವುಗಳ ಸೂಚನೆಯಾಗಿದೆ ಎಂದರು.

ಕರ್ನಾಟಕದಲ್ಲಿ ನಡೆದ ರೈತ ಚಳುವಳಿಯನ್ನು ತಮ್ಮ ಪಕ್ಷವು ಸಂಪೂರ್ಣವಾಗಿ ಬೆಂಬಲಿಸುವುದೆಂದು ನುಡಿದ ಕಾಂ. ಮುಖರ್ಜಿ ಚಳುವಳಿಯನ್ನು ಮುಂದುವರಿಸಬೇಕೆಂದು ಮನವಿ ಮಾಡಿದರು.

ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯು ವ್ಯವಸ್ಥೆ ಮಾಡಿದ್ದ ಸಭೆಯ ಅಧ್ಯಕ್ಷತೆಯನ್ನು ಪಕ್ಷದ ರಾಜ್ಯ ಶಾಖೆಯ ಕಾರ್ಯದರ್ಶಿ ಕಾಂ ಎಂ. ಕೆ. ಭಟ್ ವಹಿಸಿದ್ದರು. ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ ವಿ. ಜೆ. ಕೆ ನಾಯರ್ ಸ್ವಾಗತಿಸಿದರು. ●

ಸಂಪಾದಕೀಯ

[ಒಂದನೇ ಪುಟದಿಂದ]

ಖಂಡನೀಯ. ಲಂಕೇಶರ ಮೇಲೆ ನಡೆದ ಹಲ್ಲೆ ಹಾಗೂ ಕೆಲವೇ ವಾರಗಳ ಹಿಂದೆ ಪತ್ರಿಕಾ ಕಛೇರಿಗಳನ್ನು ಗೂಂಡಾಗಳು ಮುತ್ತಿಗೆ ಹಾಕಿದ್ದು, ಹಾಗೆಯೇ ಪೋಲೀಸರ ನಿಷ್ಕ್ರಿಯೆ-ಇವನ್ನೆಲ್ಲಾ ನೋಡಿದರೆ ಫ್ಯಾಸಿಸ್ಟ್ ಶಕ್ತಿಗಳು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡಂತಿದೆ. ಆಳುವ ಸರಕಾರ ಈ ಕೃತ್ಯಗಳನ್ನು ನಿಲ್ಲಿಸದಿದ್ದಲ್ಲಿ, ಜನತೆಯೇ ಕಾನೂನನ್ನು ಕೈಗೆತ್ತಿಕೊಂಡು ಹೋರಾಡಬೇಕಾದೀತು. ಕನ್ನಡ ನಾಡಿನ ಜನತೆ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಲು ಮುಂದಾಗಲಿ. ರಾಜ್ಯೋತ್ಸವದ ಬೆಳ್ಳಿ ಹಬ್ಬದ ಈ ಸಂದರ್ಭದಲ್ಲಿ ಪಣತೊಡಲಿ. ●

ಕಾರ್ಮಿಕ ಹೋರಾಟಗಳು ಮತ್ತು ಕಾರ್ಮಿಕ ಇಲಾಖೆ

[2ನೇ ಪುಟದಿಂದ]

ವುದು ರಾಜ್ಯಸರ್ಕಾರದ ಲೇಬರ್ ಇಲಾಖೆ ಹೋರಾಟದಲ್ಲಿರುವ ಸಹಸ್ರಾರು ಕಾರ್ಮಿಕರ ಬೇಡಿಕೆಗಳ ಬಗ್ಗೆ ಎಷ್ಟು ಅಸಡ್ಡೆಯನ್ನು ತೋರಿಸುತ್ತಿದೆ ಎಂಬುದನ್ನು ಕಾಣುತ್ತದೆ.

ಖಾಲಿಯಿರುವ ಹುದ್ದೆಗಳನ್ನು ಕ್ಷಿಪ್ರದಲ್ಲಿಯೇ ಭರ್ತಿ ಮಾಡಬೇಕೆಂದು ರಾಜ್ಯಸರ್ಕಾರವನ್ನು ಒತ್ತಾಯಪಡಿಸುವುದರೊಂದಿಗೆ ಈಗಿರುವ ಅಧಿಕಾರಿಗಳ ಬೇಜವಾಬ್ದಾರಿತನ, ಅಲಕ್ಷ್ಯಗಳ ಬಗ್ಗೆ ಉನ್ನತ ಅಧಿಕಾರಿಗಳು ತನಿಖೆ ನಡೆಸಿ, ಚಳುವಳಿ ನಿರತ ಕಾರ್ಮಿಕರ ಬೇಡಿಕೆಗಳನ್ನು ಇತ್ಯರ್ಥಪಡಿಸಲು ಸರ್ಕಾರವು ತುರ್ತುಕ್ರಮ ತೆಗೆದುಕೊಳ್ಳಬೇಕೆಂದೂ, ಮುಂದೆ ಇಂತಹ ಕಾರ್ಮಿಕ ಚಳುವಳಿಯಾಗುವಾಗ ಲೇಬರ್ ಅಧಿಕಾರಿ ಗೈರುಹಾಜರಾಗದಂತೆ ನೋಡಿಕೊಳ್ಳಬೇಕೆಂದೂ ಸಿ ಐ ಟಿ ಯು ವಿನ ಕರ್ನಾಟಕ ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಸರಕಾರವನ್ನು ಒತ್ತಾಯಿಸಿದ್ದಾರೆ.

ಸರ್ವಾಧಿಕಾರಿ ಪ್ರವೃತ್ತಿಯ ವಿರುದ್ಧ ಐಕ್ಯ ಹೋರಾಟಕ್ಕೆ ಕರೆ

[ಒಂದನೇ ಪುಟದಿಂದ]

ನಿಜಸ್ವರೂಪವನ್ನು ಬಹಿರಂಗಗೊಳಿಸುತ್ತಿರುವ ಸಿ. ಪಿ. ಐ. (ಎಂ) ಮತ್ತಿತರ ಎಡ ರಾಜಕೀಯ ಪಕ್ಷಗಳನ್ನೂ, ಸಾಮುದಾಯಿಕ ಸಂಘಟನೆಗಳನ್ನೂ ಅಲ್ಪಸಂಖ್ಯಾತರು ಮತ್ತು ಬಯಲುಸೀಮೆಯ ಬುಡಕಟ್ಟು ಜನರನ್ನೂ ಕೇಂದ್ರಸಮಿತಿ ಅಭಿನಂದಿಸಿದೆ. ಇತ್ತೀಚೆಗೆ ಮಣಿಪುರ ಮತ್ತು ಆಸುಪಾಸಿನ ಇತರ ರಾಜ್ಯಗಳಲ್ಲೂ ಅಸ್ಸಾಂ ಮಾದರಿಯ ಚಳುವಳಿ ಆರಂಭಗೊಂಡಿರುವುದರ ಕುರಿತು ಕೇಂದ್ರಸಮಿತಿ ವ್ಯಾಕುಲ ವ್ಯಕ್ತಪಡಿಸಿದೆ.

ತ್ರಿಪುರಾದಲ್ಲಿ ಸಿ. ಪಿ. ಐ. (ಎಂ) ಮತ್ತಿತರ ಎಡಪಕ್ಷಗಳು ನಡೆಸಿದ ಪ್ರಚಾರ ಪ್ರಕ್ಷೋಭೆಯ ಫಲವಾಗಿ ಬುಡಕಟ್ಟು ಜನರು ಮತ್ತು ಇತರರ ನಡುವೆ ಹೆಚ್ಚಿನ ಸೌಹಾರ್ದ ಏರ್ಪಡುತ್ತಿದೆ. ಮುಖ್ಯವಾಗಿ ಸಿ. ಪಿ. ಐ. (ಎಂ)ನ ಕಾರ್ಯಕರ್ತರೇ ಬಲಿಯಾಗಿರುವಂತೆ ಅಲ್ಲಲ್ಲಿ ಒಂದೆರಡು ಕೊಲೆಗಳಾಗುತ್ತಿರುವುದನ್ನು ಬಿಟ್ಟರೆ ಟಿ. ಯು. ಜೆ. ಎಸ್.ನ ಸಂಕುಚಿತವಾದಿಗಳು ಬಂಗಾಲಿಗಳ ಮೇಲೆ ಸಾಮೂಹಿಕ ಹಲ್ಲೆ ನಡೆಸುತ್ತಿರುವುದೂ ಅಮ್ರ ಬಂಗಾಲಿಗಳು ಬುಡಕಟ್ಟು ಜನರ ಮೇಲೆ ಆಕ್ರಮಣ ನಡೆಸುವುದೂ ಹೆಚ್ಚುಕಡಿಮೆ ನಿಂತುಹೋಗಿರುವುದು ಗಮನಾರ್ಹ. ಬಂಗಾಲಿಗಳು ಬಹುಸಂಖ್ಯಾತರಾಗಿರುವ ಅನೇಕ ಕಡೆ ಅವರು ಅಮ್ರಬಂಗಾಲಿಗಳ ದಾಳಿಯಿಂದ ಬುಡಕಟ್ಟು ಜನರನ್ನು ಕಾಪಾಡಿದುದೂ, ಇನ್ನೂ ಕೆಲವೆಡೆ ಬುಡಕಟ್ಟು ಜನರು ಬಂಗಾಲಿಗಳಿಗೆ ರಕ್ಷಣೆ ಒದಗಿಸಿದಂತಹ ಘಟನೆಗಳೂ ನಡೆದಿವೆ. ಬುಡಕಟ್ಟು ಜನರು ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳನ್ನೊಳಗೊಂಡ ಸ್ವಾಯತ್ತ ಜಿಲ್ಲಾ ಕೌನ್ಸಿಲ್ ಒಂದನ್ನು ರಚಿಸುವಂತೆ ತ್ರಿಪುರಾ ವಿಧಾನ ಸಭೆಯು ಮಸೂದೆಯೊಂದನ್ನು ಅಂಗೀಕರಿಸಿದ್ದರೂ ಕೇಂದ್ರ ಸರಕಾರ ಸಂವಿಧಾನದ ಆರನೇ ಶೆಡ್ಯೂಲಿನ ಪ್ರಕಾರ ಇದನ್ನು ರಚಿಸಲು ಒಪ್ಪದೆ ಇರುವುದು ವಿಷಾದಕರ.

ಪ. ಬಂಗಾಳ ಸರಕಾರದ ವಿರುದ್ಧ ಕೇಂದ್ರಸರಕಾರದ ಪಕ್ಷಪಾತ ಪೂರಿತ ವರ್ತನೆಯನ್ನು ಕೇಂದ್ರಸಮಿತಿ ಖಂಡಿಸಿದೆ. ತಾನು ಮೊದಲೇ ಒಪ್ಪಿರುವ ಬರ್ಡ್ ಕಂಪೆನಿಯ ರಾಷ್ಟ್ರೀಕರಣ, ಬಂಗಾಳ ಪೇಪರ್ ಪಲ್ಪ್ ಫ್ಯಾಕ್ಟರಿ ಮತ್ತು ಹಾಲ್ದಿಯಾದ ಹಡಗು ದುರಸ್ತಿ ಕಾರ್ಖಾನೆಗಳ ರಾಷ್ಟ್ರೀಕರಣ ಮತ್ತಿತರ ಯೋಜನೆಗಳನ್ನು ಕೇಂದ್ರಸರಕಾರವು ಇದೀಗ ಕೈಬಿಡುತ್ತಿದೆ. 'ಕೂಲಿಗೆ ಕಾಳು' ಕಾರ್ಯಕ್ರಮಕ್ಕೆ ಬೇಕಾದ ಗೋಧಿಯನ್ನು ಕುಂಟುನೆಪವೊಡ್ಡಿ ಕೇಂದ್ರಸರಕಾರವು ಸರಬರಾಜು ಮಾಡುತ್ತಿಲ್ಲ. ಕೇಂದ್ರಸರಕಾರವು ತನ್ನ ಪ್ರಜಾಸತ್ತಾ ವಿರೋಧಿ ನಿಲುಮೆಯನ್ನು ತ್ಯಜಿಸಿ ತಾನು ನೀಡಿದ್ದ ಆಶ್ವಾಸನೆಗಳನ್ನು ಈಡೇರಿಸಬೇಕೆಂದೂ ಕೇಂದ್ರಸಮಿತಿ ಆಶಯವ್ಯಕ್ತಪಡಿಸಿದೆ. ಕೇರಳಸರಕಾರವನ್ನು ಕಿತ್ತುಹಾಕಲು ಕೇಂದ್ರ ಸಂಪರ್ಕ ಮಂತ್ರಿ ಸಿ ಎಂ ಸ್ಟೀಫನ್ ಪ್ರಯತ್ನಿಸುತ್ತಿರುವುದನ್ನೂ ಇದಕ್ಕೆ ಸ್ವತಃ ಪ್ರಧಾನಿಯೇ ಕುಮ್ಮಕ್ಕಾಗಿರುವುದನ್ನೂ ಕೇಂದ್ರಸಮಿತಿ ಖಂಡಿಸಿದೆ.

ಮೊರಾದಾಬಾದ್, ಅಲಿಘರ್, ಅಲ್ಲಹಾಬಾದ್ ಮತ್ತು ಇತರ ಕಡೆ ನಡೆದ ಘಟನೆಗಳೂ ಸೇರಿ ಎಲ್ಲೆಡೆ ಕೋಮುವಾರು ಗಲಭೆಗಳು ಹೆಚ್ಚುತ್ತಿವೆ. ಪೋಲೀಸ್ ಮತ್ತು ಪ್ರಾದೇಶಿಕ ಸಶಸ್ತ್ರ ಪಡೆಗಳಲ್ಲೂ ಈ ಕೋಮುವಾರು ಪೂರ್ವಾಗ್ರಹ ಪ್ರಬಲವಾಗಿರುವುದು ಕಂಡುಬರುತ್ತಿದೆ. ಕೋಮುವಾರು ಗಲಭೆಗಳನ್ನು ತಡೆಯುವಲ್ಲಿ ರಾಷ್ಟ್ರೀಯ ಸಮಗ್ರತಾ ಕೌನ್ಸಿಲ್ ವಿಫಲವಾಗಿರುವುದರ ಹಿನ್ನೆಲೆಯಲ್ಲಿ ಎಲ್ಲ ಜಾತ್ಯತೀತ ಶಕ್ತಿಗಳನ್ನೂ ಒಂದುಗೂಡಿಸಿ ಮತೀಯ ಸೌಹಾರ್ದವನ್ನು ಕಾಯ್ದುಕೊಳ್ಳಲು ಸೈದ್ಧಾಂತಿಕ ಹೋರಾಟ ನಡೆಸಲೂ ಕೇಂದ್ರ ಸಮಿತಿ ನಿರ್ಧರಿಸಿದೆ.

ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಕಾಂಗ್ರೆಸ್ (ಐ) ಪ್ರಚೋದಿತ ವಕೀಲರ ಸಮ್ಮೇಳನವು ಅಧ್ಯಕ್ಷೀಯ ಆಡಳಿತ ಪದ್ಧತಿ ಬೇಕೆಂದು ಕೇಳಿಕೊಂಡಿರುವುದೂ, ನ್ಯಾಯಾಧೀಶರುಗಳನ್ನು ಮನಬಂದಂತೆ ವರ್ಗಾವರ್ಗಿ ಮಾಡಲು ಕಾನೂನು ಮಂತ್ರಿಗಳು ನಿರಂತರ ಪ್ರಯತ್ನಿಸುತ್ತಿರುವುದೂ ಕೇಂದ್ರ ಸರಕಾರವು ಮತ್ತೊಮ್ಮೆ ಸರ್ವಾಧಿಕಾರದತ್ತ ಸಾಗುತ್ತಿರುವುದನ್ನು ತೋರಿಸಿಕೊಟ್ಟಿದೆ. ಸರ್ವಾಧಿಕಾರಿ ಪ್ರವೃತ್ತಿ ಸ್ವಾತಂತ್ರ್ಯ ನಂತರ ನಮ್ಮ ಸರಕಾರಗಳು ಅನುಸರಿಸಿದ ಗುತ್ತೇದಾರಿ ಬಂಡವಾಳಶಾಹಿ ಪರ ಆರ್ಥಿಕ ಪದ್ಧತಿಯಲ್ಲಿ ಹಾಸುಹೊಕ್ಕಾಗಿದೆ. ತನ್ನ ದೋಷಪೂರಿತ ನೀತಿಯಿಂದಾಗಿ ಉದ್ಭವಿಸಿರುವ ಬೆಲೆಏರಿಕೆ, ನಿರುದ್ಯೋಗ ಮುಂತಾದ ಪಿಡುಗುಗಳನ್ನು ನಿವಾರಿಸುವ ಬದಲು ಸರಕಾರವು ಪ್ರಜಾಪ್ರಭುತ್ವವನ್ನು ನಿರ್ನಾಮ ಮಾಡಲು ಹವಣಿಸುತ್ತಿದೆ. ರೈತರಿಗೆ ತಮ್ಮ ಬೆಳೆಗನುಗುಣವಾದ ಪ್ರತಿಫಲ ಸಿಗುತ್ತಿಲ್ಲ. ಗುತ್ತೇದಾರಿ ಮತ್ತು ಬಂಡವಾಳಶಾಹಿಗಳಿಗೆ ಹೆಚ್ಚುಹೆಚ್ಚು ರಿಯಾಯಿತಿ ತೋರಿಸಲಾಗುತ್ತಿದೆ ಹೀಗಾಗಿ ಬೆಲೆಗಳು ಇನ್ನೂ ಹೆಚ್ಚುತ್ತಿವೆ. ವಿರೋಧ ಪಕ್ಷಗಳ ನಡುವಣ ಅನೈಕ್ಯದಿಂದಾಗಿ ಸರಕಾರಕ್ಕೆ ತನ್ನ ಕೆಲಸ ಇನ್ನೂ ಸುಲಭವಾಗುತ್ತಿದೆ. ಈ ಹಿನ್ನೆಲೆಯಲ್ಲಿ ನವದೆಹಲಿಯಲ್ಲಿ ಸೇರಿದ್ದ ಆರು ಪಕ್ಷಗಳ ಸಮಾವೇಶವು ಬೆಲೆಯೇರಿಕೆ, ಕೋಮುವಾದಿ ಅಪಾಯಗಳ ನಿವಾರಣೆ ಹಾಗೂ ಕಾರ್ಮಿಕ ಹಕ್ಕುಗಳು ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ಜನತೆಯನ್ನು ಸಂಘಟಿಸಿ ಹೋರಾಟ ನಡೆಸಲು ನಿರ್ಧರಿಸಿರುವುದು ಮಹತ್ವಪೂರ್ಣ. ಈ ಒಕ್ಕಟ್ಟನ್ನು ಕಾಯ್ದುಕೊಳ್ಳುವಂತೆಯೂ ಅದನ್ನು ಬಲಪಡಿಸುವಂತೆಯೂ ಕೇಂದ್ರಸಮಿತಿ ಕರೆ ನೀಡಿದೆ.

ಈ ದಿಸೆಯಲ್ಲಿ ಸಂಯುಕ್ತ ಹೋರಾಟಗಳನ್ನು ಈಗಾಗಲೇ ಪ್ರಾರಂಭಿಸಿರುವ ಆಂಧ್ರಪ್ರದೇಶ, ಪಂಜಾಬ್, ಮಹಾರಾಷ್ಟ್ರ ಮತ್ತಿತರ ರಾಜ್ಯಗಳ ಜನತೆಯನ್ನು ಕೇಂದ್ರಸಮಿತಿ ಅಭಿನಂದಿಸಿದೆ. ಇತ್ತೀಚೆಗೆ ತಮ್ಮ ನ್ಯಾಯುತ ಬೇಡಿಕೆಗಳ ಈಡೇರಿಕೆಗಾಗಿ ಬೃಹತ್ ಹೋರಾಟ ನಡೆಸಿದ ಉತ್ತರ ಕರ್ನಾಟಕದ ರೈತರನ್ನೂ ಕೇಂದ್ರ ಸಮಿತಿ ಅಭಿನಂದಿಸಿದೆಯಲ್ಲದೆ ರೈತರ ಕೃಷಿ ಉತ್ಪನ್ನಗಳಿಗೆ ಯೋಗ್ಯಬೆಲೆ ಸಿಗಬೇಕೆಂದೂ ಅವರಿಗೆ ಸಾಲಗಳಲ್ಲಿ ರಿಯಾಯಿತಿ ಲಭಿಸಬೇಕೆಂದೂ ಒತ್ತಾಯಿಸಿದೆ.

ಲಂಕೇಶರ ಮೇಲಿನ ಹಲ್ಲೆಯ ಖಂಡನೆ

ಖ್ಯಾತ ಬರಹಗಾರ, ಪತ್ರಕರ್ತ ಶ್ರೀ ಪಿ. ಲಂಕೇಶರ ಮೇಲೆ ತಾರೀಖು 2-11-80ರಂದು ಕನ್ನಡ ಚಳುವಳಿಗಾರರು ನಡೆಸಿದ ಹಲ್ಲೆಯನ್ನು ಸಿ. ಪಿ. ಐ. (ಎಂ), ಎಸ್. ಎಫ್. ಐ., ಸಿ. ಐ. ಟಿ. ಯು., ಮತ್ತು ಇತರ ಸಂಘ ಸಂಸ್ಥೆಗಳು ಉಗ್ರವಾಗಿ ಖಂಡಿಸಿವೆ. ●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT